# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಮೇ 2009 | ಆಂತರಿಕ ಪ್ರಸಾರಕ್ಕಾಗಿ ಮಾತ್ರ | ಸಂಪುಟ 2 ಸಂಚಿಕೆ 3


ವಂದನೆಗಳು,ಪ್ರಿಯ ಬಾಬೂಜಿಯವರ ಜನ್ಮ ಮಹೋತ್ಸವವನ್ನು ಬರೋಡಾದಲ್ಲಿ ಹಾಗೂ ದೇಶದೆಲ್ಲೆಡೆ ವಿವಿಧ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ. ಈ ಉತ್ಸವಗಳು ರಾಷ್ಟ್ರದೆಲ್ಲೆಡೆ ಅಭ್ಯಾಸಿಗಳ ಆಧ್ಯಾತ್ಮಿಕ ತೃಷೆಯನ್ನು ತಣಿಸುವಂತಹುದಾಗಿವೆ ಎಂಬುದನ್ನು ಹೇಳುವ ಅವಶ್ಯಕತೆ ಇಲ್ಲ. ಗುರುಗಳ ಇತ್ತೀಚಿನ ಕೊಡುಗೆಯಾದ ದಿವ್ಯಲೋಕದ ಪಿಸುಮಾತುಗಳು ಸಂಪುಟ–2 ಬಹಳ ಮುಖ್ಯವಾದ ಪುಸ್ತಕವು ಈ ವರ್ಷ ಬಿಡುಗಡೆಯಾಗಲಿದೆ. ಇದು ನಾವೆಲ್ಲರೂ ಯೋಚಿಸಬೇಕಾಗಿರುವ, ಹೃದಯದಲ್ಲಿ ಅನುಭವಿಸಬೇಕಾಗಿರುವ ಮತ್ತು ಜೀವನದಲ್ಲಿ ಒಂದಾಗಿಸಿಕೊಳ್ಳಬೇಕಾಗಿರುವ ಜ್ಞಾನ ಭಂಡಾರವಾಗಿದೆ.

ಈ ಸಂಚಿಕೆಯು ಗುರುಗಳ ಭಾರತದೆಲ್ಲೆಡೆಯ ಅನೇಕ ನಗರಗಳ ವ್ಯಾಪಕ ಪ್ರವಾಸವನ್ನು ತರಬೇತಿ ಕಾರ್ಯಕ್ರಮಗಳನ್ನು, ಮುಕ್ತ ಸಭೆಗಳನ್ನು ಹಾಗೂ ವಿವಿಧ ಕೇಂದ್ರಗಳಲ್ಲಿ ಜರುಗಿದ ವಿ.ಬಿ.ಎಸ್.ಇ ಕಾರ್ಯಕ್ರಮಗಳನ್ನು ಹಾಗೂ ಪ್ರಭಾ ಕೇಂದ್ರಗಳು ವಿಭಾಗ ಅಂಕಣದಲ್ಲಿ ರಾಯಚೂರು ಆಶ್ರಮವನ್ನು ಒಳಗೊಂಡಿದೆ. ಜುಲೈ 2009ರ ಸಂಚಿಕೆಗೆ ಅಂಕಣಗಳನ್ನು ಸ್ವೀಕರಿಸಲು ಜೂನ್ 15 ಕೊನೆಯ ದಿನವಾಗಿದೆ. ದಯಮಾಡಿ ಸಂಗತಿಗಳ ಬಗೆಗೆ ನಿಮ್ಮ ಬರಹಗಳನ್ನು ಫೋಟೊ ಸಮೇತವಾಗಿ ಝೋನಲ್–ಇನ್–ಚಾರ್ಜ್‌ರ ಮೂಲಕ ಕಳುಹಿಸಿ.

ವಂದನೆಗಳೊಂದಿಗೆ
ಸಂಪಾದಕ ಮಂಡಳಿ



## ವಿಶ್ವ ಪ್ರಾರ್ಥನೆ

ನಮ್ಮ ಮಿಷನ್ನಿನಲ್ಲಿ ರಾತ್ರಿ 9.00 ಗಂಟೆಯ ಪ್ರಾರ್ಥನೆಯನ್ನು ಅನೇಕ ಅಭ್ಯಾಸಿಗಳು ನಿರ್ಲಕ್ಷಿಸುತ್ತಿದ್ದಾರೆ. ಅದು ಮಹತ್ವವುಳ್ಳದ್ದಾಗಿದ್ದು ಆ ರೀತಿ ನಿರ್ಲಕ್ಷಿಸತಕ್ಕದ್ದಲ್ಲ. ಅದು ಅಂತರಂಗಗಳ ನಡುವೆ ಕಂಪನವುಂಟು ಸ್ತರದಲ್ಲಿ ಚೈತನ್ಯದಾಯಕವೂ, ಐಕಮತ್ಯವನ್ನುಂಟುಮಾಡುವಂತಹುದೂ ಆಗಿದ್ದು, ಅಲ್ಲಿ ಅನುಕೂಲಕರ ಅಲೌಕಿಕತೆಯನ್ನು, ಎಂದರೆ ಅನುಷ್ಠಾನ ಮಾಡುತ್ತಿರುವ ಅಭ್ಯಾಸಿಗಳ ನಡುವೆ ಸೂಕ್ಷ್ಮ ಬಾಂಧವ್ಯವನ್ನು ಸೃಷ್ಟಿಸುತ್ತದೆ. ಈ ಆಚರಣೆಯನ್ನು ಅಲಕ್ಷಿಸಲಾಗದು. ಹೀಗೆಂದು ಕೇಳುವುದು ಅತಿ ಎನಿಸುವುದೇನು? ಇದರ ಬಗ್ಗೆ ಅರಿತುಕೊಳ್ಳುವುದು ಎಲ್ಲರಿಗೂ ವಿವೇಕಯುತವಾದುದು. ಕೆಲವು ಕ್ಷಣಗಳ ಅಂತರ್ವೀಕ್ಷಣೆ ಮತ್ತು ಚಿಂತನೆಯ ಏಕಾಗ್ರತೆ ಮಾತ್ರವೇ ನಮ್ಮ ಮಿಷನ್ನಿನ, ಎಂದರೆ ತಮ್ಮ ಸದ್ಗುರುಗಳನ್ನು ಅನುಸರಿಸಲು ತೀರ್ಮಾನಿಸಿರುವ ಎಲ್ಲ ಸೋದರ ಸೋದರಿಯರಿಗೂ ಉಪಕಾರವಾಗುತ್ತದೆ. ಇದನ್ನು ಸರ್ವರ ಒಳಿತಿಗಾಗಿ ವಿವೇಕಿಗಳು ನೆನಪಿಡುವಂತಾಗಲಿ.

–ಬಾಬೂಜಿ ಮಹಾರಾಜರು

# ಗುರುಗಳ ಪ್ರವಾಸ

## ಕೋಲ್ಕತ್ತ

ಜನವರಿ ಮತ್ತು ಫೆಬ್ರುವರಿಯ ಉತ್ತರ ಭಾರತದ ಬಿಡುವಿಲ್ಲದ ಪ್ರವಾಸದ ನಂತರ ಇಂದೋರ್‌ನಿಂದ ಮುಂಬಯಿ ಮುಖೇನ ಫೆಬ್ರುವರಿ 29ರಂದು ಕೊಲ್ಕತ್ತಾಗೆ ಬಂದು ಸೇರಿದರು. ಗುರುಗಳು ದಣಿದಂತೆ ಹಾಗೂ ಬಳಲಿದವರಂತೆ ಕಂಡರು. ಹಾಗೂ ಅವರು ಸಹೋದರ ಅಜಯ್ ಭಟ್ಟರ್‌ರವರ ನಿವಾಸವಾದ “ಡಿವೈನ್ ಬ್ಲಿಸ್”ನಲ್ಲಿ ವಿಶ್ರಮಿಸಿದರು. ಮರುದಿನ ಅವರು ದೀರ್ಘ ಸಮಯವನ್ನು ಅವರ ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವುದರಲ್ಲಿ ಕಳೆದರು, ಇದನ್ನು ಕಂಡ ಪ್ರತಿಯೊಬ್ಬರಿಗೂ ಅವರು ಈ ವಯಸ್ಸಿನಲ್ಲಿ ಹೀಗೆ ದೀರ್ಘ ಸಮಯದವರೆಗೆ ಕೆಲಸ ಮಾಡಲು ಹೇಗೆ ಸಾಧ್ಯ ಎಂದು ಆಶ್ಚರ್ಯವಾಗುತ್ತದೆ.

22ರಂದು ಗುರುಗಳು ಖರಗ್‌ಪುರದ ಎರಡನೇ ಕ್ರೆಸ್ಟ್‌ನ, (ಮೊದಲನೆಯದು ಈಗಾಗಲೇ ಬೆಂಗಳೂರಿನಲ್ಲಿ ಕಾರ್ಯನಿರತವಾಗಿದೆ) ನಿರ್ಮಾಣದ ಪ್ರಗತಿಯನ್ನು ನೋಡಲು ಭೇಟಿ ನೀಡಿದರು. ಅವರು ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ ಕೊಲ್ಕತ್ತಾಗೆ ಹಿಂದಿರುಗಿದರು. ತದನಂತರ ಅಲ್ಲಿಂದ 24ರಂದು ಚೆನ್ನೈಗೆ ಹಿಂದಿರುಗಿದರು.






## ಚೆನ್ನೈ

ಗುರುಗಳು ತಮ್ಮ ಉತ್ತರ ಭಾರತದ ಸುದೀರ್ಘ ಪ್ರವಾಸದ ನಂತರ ಚೆನ್ನೈನಲ್ಲಿ ತಂಗಿದರು. ಈ ಮೊದಲು ಗುರುಗಳು ಸತ್ಪೋಲ್‌ನಲ್ಲಿ “ದಿವ್ಯಲೋಕದ ಪಿಸುಮಾತುಗಳು, ಸಂಪುಟ–2” ಇದು ಏಪ್ರಿಲ್ 30ರಂದು ಬಿಡುಗಡೆಯಾಗುವುದೆಂದು ಪ್ರಕಟಣೆ ಮಾಡಿದ್ದರು.

ಮಾರ್ಚ್ 3ರಂದು ಗುರುಗಳು ಪುನಃ ಮಣಪಾಕ್ಕಂನಲ್ಲಿ “ಈ ಪುಸ್ತಕಗಳು ಸಹಜಮಾರ್ಗದ ಬೈಬಲ್ ಆಗಲಿವೆ. ಸಂಪುಟ ಒಂದನ್ನು ನೀವು ಗಮನವಿಟ್ಟು ಓದಿದ್ದರೆ, ಅವು ಹಾಗೆ ಓದಲು ಅರ್ಹವಾಗಿವೆ, ಈ ಸಂದೇಶಗಳು ವಿಶ್ವದ ಎಲ್ಲೆ ಮೀರಿರುವಂತಹವು. ಆದುದರಿಂದ ಅವು ಶೃತಿ ಎಂದು ಕರೆಯಲು ಯೋಗ್ಯವಾಗಿವೆ. ಶೃತಿ ಎಂದರೆ ಪ್ರಕಟಿತ ಜ್ಞಾನ, ಕಿವಿಯಿಂದ ಕೇಳಿದ ಜ್ಞಾನವಲ್ಲ, ಯೋಚನೆಗೆ ಬಂದ ಜ್ಞಾನವಲ್ಲ ಬುದ್ಧಿಶಕ್ತಿಯದ್ದಲ್ಲ, ಮಾನವರಿಗೆ ಕೊಡಲೂ ಅಧಿಕಾರವಿಲ್ಲದವು. ಬಾಬೂಜಿಯವರು ಒಬ್ಬ ಮಾನವರಾಗಿದ್ದರು. ಅವರು ದೈವವಾಗಿದ್ದರು. ನೀವು ಇದಕ್ಕೆ ಏನು ತೆರಬೇಕೆಂಬುದನ್ನು ನೋಡಬೇಡಿ” ಎಂದು ಹೇಳಿದರು.

ಅಭ್ಯಾಸಿಗಳೊಂದಿಗೆ ಅನೌಪಚಾರಿಕವಾಗಿ ಮಾತನಾಡುವ ಸಂದರ್ಭಗಳಲ್ಲಿಯೂ ಅವರ ಗುರುಗಳಿಂದ ಬಂದ ಈ ಸಂದೇಶಗಳು ಪ್ರತಿಯೊಬ್ಬರನ್ನು ತಲುಪಬೇಕೆನ್ನುವ ಅವರ ಬಯಕೆ ಮತ್ತು ಉತ್ಸುಕತೆಯನ್ನು ಪ್ರತಿಯೊಬ್ಬರೂ ಕಾಣಬಹುದಿತ್ತು. ಯಾವ ಒಬ್ಬ ಅಭ್ಯಾಸಿಯೂ ಈ ಪ್ರತಿಯನ್ನು ತಪ್ಪಿಸಿಕೊಳ್ಳುವುದು ಅವರಿಗೆ ಇಷ್ಟವಿಲ್ಲ. ಇದನ್ನು ಅವರು ಉತ್ತಮ ರೀತಿಯಲ್ಲಿ ಖರ್ಚುಮಾಡಿದ ಹಣವಾಗುತ್ತದೆ ಎಂದು ಹೇಳಿದರು. ಸತ್ಸಂಗದ ಮುನ್ನ ಮಾತನಾಡಿದ ಕೆಲವೇ ಸಂದರ್ಭಗಳಲ್ಲಿ ಇದೂ ಒಂದಾಗಿದೆ ಎಂದು ಹೇಳಿದರು.

## ಪುಣೆ

ಗುರುಗಳು ಮಾರ್ಚ್ 12ರಂದು ಪುಣೆಯನ್ನು ಬಂದು ಸೇರಿದರು. ವಿಮಾನ ನಿಲ್ದಾಣಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯಾಸಿಗಳು ಅವರನ್ನು ಸ್ವಾಗತಿಸಿದರು. ಪನ್‌ಶೆಟ್‌ನಲ್ಲಿರುವ ಎಸ್.ಎಮ್.ಎಸ್.ಎಫ್‌ನ ರಿಟ್ರೀಟ್ ಸೆಂಟರ್– ಆಶ್ರಯ ಸ್ಥಾನಕ್ಕೆ ನಂತರದ ಕೆಲವು ದಿನಗಳಲ್ಲಿ ಮಹಾರಾಷ್ಟ್ರದ ವಿವಿಧ ಕೇಂದ್ರಗಳಿಂದ ಸುಮಾರು 1700 ಅಭ್ಯಾಸಿಗಳು ಬಂದಿದ್ದರು. 13ರಂದು ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು, ತದನಂತರ ಕೆಲವು ಭಜನೆಗಳನ್ನು ಹಾಡಲಾಯಿತು. 14ರಂದು ಅಭ್ಯಾಸಿಗಳು ಧ್ಯಾನ ಮಾಡುತ್ತಾ, ಅನುಭವಗಳನ್ನು ಹಂಚಿಕೊಳ್ಳುತ್ತಾ, ಗುರುಗಳ ಭಾಷಣಗಳ ಡಿವಿಡಿಗಳನ್ನು ನೋಡುತ್ತಾ ದಿನವನ್ನು ಕಳೆದರು. 15ರಂದು ಗುರುಗಳು ಭಾಷಣವನ್ನು ನೀಡುತ್ತ ಹೇಳಿದರು “ ನಮ್ಮ ಆಶ್ರಮಗಳು ಹೆಚ್ಚು ಹೆಚ್ಚು ಹಿತಕರ ಸಹವಾಸವಿರುವ, ಒಡನಾಟವಿರುವ, ಕುಳಿತು ಮಾತನಾಡಲು ಅವಕಾಶವಿರುವ, ಗೊಡ್ಡು ಹರಟೆ ಹೊಡೆಯಲು ಅವಕಾಶವಿರುವ ಸಭೆಗಳಿಗೆ ಸ್ಥಳಾವಕಾಶ ಮಾಡಿಕೊಡುತ್ತಿವೆ, ಹಾಗೂ ಸಹಜ ಮಾರ್ಗಕ್ಕೆ ಸಾಧನೆಯಲ್ಲಾಗಲಿ, ಸಿದ್ಧಾಂತದಲ್ಲಾಗಲಿ ಅತಿ ಕಡಿಮೆ ಸಮಯವನ್ನು ಸಮರ್ಪಿಸುವಂತಾಗುತ್ತಿವೆ ಎಂದು ನನಗೆ ಭಯವಾಗುತ್ತಿದೆ.”

ಭಾಷಣದ ನಂತರ ಮಕ್ಕಳಿಂದ ನಿರ್ವಹಿಸಲ್ಪಟ್ಟ ಕಾರ್ಯಕ್ರಮವನ್ನು ನೋಡಿದರು ಹಾಗು ಮಧ್ಯಾಹ್ನ 2.30ಕ್ಕೆ ರಿಟ್ರೀಟ್ ಸೆಂಟರ್– ಆಶ್ರಯ ಸ್ಥಾನದಿಂದ ಹೊರಟರು. ಈ ಭೇಟಿಯಲ್ಲಿ ಅವರು ಅನೇಕ ಪ್ರಶಿಕ್ಷಕರನ್ನು ನೇಮಿಸಿದರು ಹಾಗೂ ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದರು.







ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಗುರುಗಳ ಪ್ರವಾಸ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

## ಪನ್‌ವೆಲ್, ಮುಂಬೈ





ಮಾರ್ಚ್ 15ರಂದು ಗುರುಗಳು ಪನ್‌ವೆಲ್ ಆಶ್ರಮಕ್ಕೆ ಬಂದರು. ಅಲ್ಲಿ ಅವರು ಸಾಂಪ್ರದಾಯಿಕ ಉಡುಗೆಗಳಿಂದ ಅಲಂಕೃತವಾದ ಯುವ ಸಹೋದರಿಯರಿಂದ ಸ್ವಾಗತಿಸಲ್ಪಟ್ಟರು. ಆಯಾಸದ ಪ್ರಯಾಣದ ಹೊರತಾಗಿಯೂ ಗುರುಗಳು ಸಂಜೆ 5 ಗಂಟೆಗೆ ಮುಂಬೈ ಮತ್ತು ಸಮೀಪದ ಕೇಂದ್ರಗಳಿಂದ ಸೇರಿದ್ದ ಸುಮಾರು 1000 ಅಭ್ಯಾಸಿಗಳಿಗೆ ಬೈಠಕನ್ನು ನೀಡಿದರು. ಸತ್ಸಂಗದ ನಂತರ ಮಾಳಿಗೆಯ ಮೇಲೆ ವಿಹರಿಸಿದರು ಹಾಗೂ "ಗ್ರೀನ್ ಝೋನ್"ನ ಸುಂದರ ನೋಟವನ್ನು ಸವಿದರು. ತದನಂತರ ಮಾಳಿಗೆಯ ಮೇಲೆ ಪೂರ್ಣ ಚಂದ್ರನ ಬೆಳಕಿನಡಿಯಲ್ಲಿ ಅಭ್ಯಾಸಿಗಳೊಂದಿಗೆ ಸಮಯ ಕಳೆದರು.

ಮಾರ್ಚ್ 16ರಂದು ಗುರುಗಳು ಬೆಳಗಿನ ಜಾವ 5.15 ಗಂಟೆಗೆ ವಾಯು ವಿಹಾರ ಮಾಡಿದರು. ಹಾಗೂ ಅಭ್ಯಾಸಿಗಳೊಂದಿಗೆ ಕಾಫಿಯನ್ನು ಸವಿದರು. ಬೆಳಗಿನ ಸತ್ಸಂಗವನ್ನು 9 ಗಂಟೆಗೆ ನಡೆಸಲಾಯಿತು, ತದನಂತರ ಭಜನೆಯ ಕಾರ್ಯಕ್ರಮವಿತ್ತು. ಪೂರ್ವಾಹ್ನದಲ್ಲಿ ಗುರುಗಳು "ಗ್ರೀನ್ ಝೋನ್"ಗೆ ತೆರಳಿ ಅಲ್ಲಿ ಒಂದು ಮಾವಿನ ರೆಂಬೆಯನ್ನು ಗುರುಗಳು ನಡೆದು ಬರುವ ದಾರಿಯಲ್ಲಿ ಒಬ್ಬ ಅಭ್ಯಾಸಿಯು ಮಾವಿನ ರೆಂಬೆಯನ್ನು ಗುರುಗಳು ನಡೆದು ಬರಲು ಅನುಕೂಲಕರವಾಗಿರುವಂತೆ ಎತ್ತಿ ಹಿಡಿದಿದ್ದರು. ಗುರುಗಳು ಹೇಳಿದರು, "ಅದನ್ನು ಎತ್ತಬೇಡ, ಬಿಟ್ಟುಬಿಡು, ಅದು ಮುರಿದುಹೋಗುವಂತಿದೆ, ನಿಸರ್ಗದ ಮುಂದೆ ನಾವು ನಮ್ಮ ತಲೆಯನ್ನು ಬಗ್ಗಿಸಿ ನಡೆಯುವುದನ್ನು ಕಲಿಯಬೇಕು." ಮಹಿಳೆಯ ದುಃಸ್ಥಿತಿಯ ಬಗ್ಗೆ ಮಾತನಾಡುತ್ತಾ ಅವರು ಹೇಳಿದರು "ಮಹಿಳೆಯರ ಜೀವನವು ವಿಶೇಷವಾಗಿ ಭಾರತದಲ್ಲಿ ಹುಟ್ಟಿನಿಂದ ಸಾಯುವವರೆಗೂ ನೋವಿನಿಂದ ತುಂಬಿದೆ. ಯಾಕೆಂದರೆ ಅವಳು ಪರಾವಲಂಬಿಯಾಗಿದ್ದಾಳೆ. "ಗ್ರೀನ್ ಝೋನ್"ನಿಂದ ಹಿಂದಿರುಗಿ ಬರುವಾಗ ಅಲ್ಲಿದ್ದ ಮಕ್ಕಳ ಶಿಸ್ತುಪಾಲನೆಯನ್ನು ಕೊಂಡಾಡಿದರು ಹಾಗೂ ಎಲ್ಲಾ ಮಕ್ಕಳಿಗೂ ಚಾಕೊಲೇಟ್ ಹಂಚಿದರು. ವೈದ್ಯರೊಬ್ಬರಿಂದ ಕೇಳಲ್ಪಟ್ಟ ಪ್ರಶ್ನೆಗೆ ಗುರುಗಳು ಉತ್ತರಿಸುತ್ತಾ, "ನೀವು ನಿರಂತರ ಸ್ಮರಣೆಯಲ್ಲಿ ಕೆಲಸಮಾಡಿದರೆ ಫಲಿತಾಂಶಗಳು ಸಾವಿರಪಟ್ಟು ಉತ್ತಮವಾಗಿರುತ್ತವೆ." 99.9% ಪ್ರಶ್ನೆಗಳು ನಮ್ಮ ಇಚ್ಛೆಗಳಿಂದ ಹುಟ್ಟುತ್ತವೆ ಎಂದು ಹೇಳುತ್ತಾ "ಸರಿಯಾದ್ದನ್ನು ಮಾಡಲು ನಿಮಗೆ ನನ್ನ ಅನುಮತಿಯೇ ಬೇಡ ಹಾಗೂ ಕೆಟ್ಟದ್ದನ್ನು ಮಾಡಲು ನಾನೆಂದೂ ಅನುಮತಿ ನೀಡಲಾರೆ" ಎಂಬ ಬಾಬೂಜಿಯವರ ಪ್ರತ್ಯುತ್ತರವನ್ನು ಹೇಳಿದರು.

ರಾತ್ರಿ ಭೋಜನದ ನಂತರ ಮಾಳಿಗೆಯಲ್ಲಿ ಚಲನಚಿತ್ರವನ್ನು ವೀಕ್ಷಿಸಿದರು. ಹೇಳಬೇಕೆಂದರೆ ಅಭ್ಯಾಸಿಗಳು ಒಳ್ಳೆಯ ಶಿಸ್ತು ಪಾಲನೆಯನ್ನು ಕಾಪಾಡಿಕೊಂಡರು. ಇದರಿಂದ ಗುರುಗಳು ಅವರ ಅತ್ಯಮೂಲ್ಯ ಸಮಯವನ್ನು ಕಾಟೇಜಿನ ಹೊರಗೆ ಕಳೆಯುವಂತೆ ಮಾಡಿ ಪ್ರತಿಫಲ ಹೊಂದಿದರು. ಅವರಿಗೆ ಸ್ಥಳಾವಕಾಶ ಮಾಡಿಕೊಟ್ಟು ಹಾಗೂ ಸ್ವಯಂ ಶಿಸ್ತನ್ನು ಕಾಪಾಡಿಕೊಳ್ಳುವುದರ ಮೂಲಕ ಅಭ್ಯಾಸಿಗಳೊಂದಿಗೆ ಗುರುಗಳು ಅವರು ಬಯಸುವವರೆಗೆ ಸಂತೋಷದಿಂದಿರುವುದಕ್ಕೆ ಇದು ಎಲ್ಲಾ ಅಭ್ಯಾಸಿಗಳು ಕಲಿತುಕೊಳ್ಳಲು ನಿದರ್ಶನವಾಗಿತ್ತು.



## ರಾಯಪುರ್

ಮಾರ್ಚ್ 17ರಂದು ಗುರುಗಳು ಛತ್ತೀಸ್‌ಗಢ ರಾಜ್ಯದ ರಾಯಪುರ್‌ಗೆ ಬಂದು ಸೇರಿದರು ಹಾಗೂ ಈ ಸುಸಂದರ್ಭದಲ್ಲಿ ಭಾಗವಹಿಸಲು ಸೇರಿದ್ದ ಸುಮಾರು 1200 ಅಭ್ಯಾಸಿಗಳಿಗೆ ಈ ಸ್ಥಳದಲ್ಲಿ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ಹೇಳಿದರು "ವಿಶ್ವ ಶಾಂತಿಯ ಕುರಿತಾಗಿ, ನೆಮ್ಮದಿಯ ಕುರಿತಾಗಿ, ಶಾಂತಿಯುತ ಅಸ್ತಿತ್ವದ ಕುರಿತಾಗಿ, ನೆಮ್ಮದಿಯ ಅಸ್ತಿತ್ವದ ಕುರಿತಾಗಿ, ಸಂತೋಷ ತುಂಬಿದ ಅಸ್ತಿತ್ವದ ಕುರಿತಾಗಿ ಒಂದು ಬಹು ಮುಖ್ಯ ವಿಷಯವಿದೆ, ಬಾಬೂಜಿ ಮಹಾರಾಜರು ಒತ್ತಿ ಹೇಳಿದ್ದಾರೆ ರಾತ್ರಿ 9 ಗಂಟೆಯ ವಿಶ್ವ ಪ್ರಾರ್ಥನೆಯನ್ನು ಮಾಡುವವರೆಗೆ ಎಲ್ಲ ಮಾನವ ಕುಲವು ಒಗ್ಗೂಡುವ ನಿರೀಕ್ಷೆಯು ಎಂದಿಗೂ ಸಾಧ್ಯವಿಲ್ಲ.

18ರ ಬೆಳಿಗ್ಗೆ ಅವರು 0.65 ಎಕರೆ ಭೂಮಿಯನ್ನು ಹೊಂದಿರುವ ಅಮಲೇಶ್ವರ ಕೇಂದ್ರಕ್ಕೆ ಭೇಟಿ ನೀಡಿದರು, ಅವರು ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ ಧ್ಯಾನ ಮಂದಿರದ ಶಂಕುಸ್ಥಾಪನೆಯನ್ನು ಮಾಡಿದರು, ಗುರುಗಳು ಈ ಸಂದರ್ಭದಲ್ಲಿ ಮಾತನಾಡುತ್ತಾ "ಮಿಷನ್ನಿನ ಇನ್ನೊಂದು ಆಶ್ರಮದ ಶಂಕುಸ್ಥಾಪನೆಯನ್ನು ನೋಡಲು ಸಹಜಮಾರ್ಗದ ಇಡೀ ಗುರು ಪರಂಪರೆಯೇ ಬಂದಿರುವುದನ್ನು ನಾನು ಅನುಭವಿಸಿದ್ದೇನೆ ಮತ್ತು ಇದು ಅವರ ಸಮ್ಮುಖದಲ್ಲಿಯೇ, ಅವರ ಆಶೀರ್ವಾದಗಳಿಂದಲೇ ಅವರ ಪ್ರೀತಿಯಿಂದಲೇ ನಡೆದಿದೆ."

19ರಂದು ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಮಕ್ಕಳು ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಮಾಡಿ ಅವುಗಳನ್ನು ಮಾರಿ ಸಂಗ್ರಹಿಸಿದ ಹಣದ ಜೊತೆಯಲ್ಲಿ ತಮ್ಮ ಕಿಸೆಯಲ್ಲಿರುವ ಹಣವನ್ನು ಸೇರಿಸಿ ಆಶ್ರಮದ ನಿರ್ಮಾಣದ ಸಲುವಾಗಿ ಗುರುಗಳಿಗೆ ಕಾಣಿಕೆಯಾಗಿ ಕೊಟ್ಟರು. ಗುರುಗಳು ಅದನ್ನು ಅತ್ಯಾನಂದದಿಂದ ಸ್ವೀಕರಿಸಿ ಹೇಳಿದರು ಹಿರಿಯರೂ ಸಹ ತಮ್ಮ ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಿದರೆ ಹಣವನ್ನು ಉತ್ತಮ ಕಾರ್ಯಗಳಿಗಾಗಿ ವಿನಿಯೋಗಿಸಬಹುದು. ಸಂಜೆ ಅವರು ತಂಗಿದ್ದ ಸ್ಥಳದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು ತದನಂತರ ಕೊಲ್ಕತ್ತಾಗೆ ಹೊರಟರು.



## ಕೊಲ್ಕತ್ತ

ಮಾರ್ಚ್ 20ರಂದು ಗುರುಗಳು ಕೊಲ್ಕತ್ತಾಗೆ ಬಂದು ಸೇರಿದರು ಹಾಗೂ ಮರುದಿನ ಬೆಳಿಗ್ಗೆ ನಿಗದಿತ ಸಮಯಕ್ಕಿಂತ ಮುಂಚೆಯೇ ಧ್ಯಾನ ಮಂದಿರಕ್ಕೆ ಬಂದರು ಹಾಗೂ ಸತ್ಸಂಗವನ್ನು ನಡೆಸಿಕೊಟ್ಟರು. ಜನರು ಅವರ ಬಳಿ ಆಧ್ಯಾತ್ಮಕತೆಗಿಂತ ಹೆಚ್ಚಾಗಿ ಪ್ರಾಪಂಚಿಕ ಕಲ್ಯಾಣಕ್ಕಾಗಿ ಬರುತ್ತಿರುವುದನ್ನು ಕುರಿತು ಬಹಳ ದುಃಖದಿಂದಲೇ ಹೇಳಿದರು. ಬಾಬೂಜಿ ಹೇಳಿದ್ದಾರೆ, "ನಿಮ್ಮಂತಹ ಜನರು ಕೆಲವರು ಮಾತ್ರವೇ ಇದ್ದಾರೆ, ಇಬ್ಬರು ಅಥವಾ ಮೂವರಿರಬಹುದು. ನಿಮ್ಮ ಹೃದಯದಲ್ಲಿ ನಾನಿರುವುದರಿಂದ ನೀವು ಹೇಗೂ ನಿಭಾಯಿಸುವಿರಿ, ಆದರೆ ನಮ್ಮ ಅಭ್ಯಾಸಿ ಬಂಧುಗಳಲ್ಲಿ ಉಳಿದವರು, ನನ್ನನ್ನು ಗಣನೆಗೇ ತೆಗೆದುಕೊಂಡಿಲ್ಲ.ಅವರು ಪಡೆಯಲು ಮಾತ್ರ ನನ್ನಲ್ಲಿಗೆ ಬರುತ್ತಾರೆ. ಅವರು ನಿರಂತರವಾಗಿ ಪಡೆಯಬೇಕೆನ್ನುತ್ತಾರೆ. ಅವರು ಧ್ಯಾನವನ್ನು ಸರಿಯಾಗಿ ಮಾಡುವುದಾದರೆ ನಾನು ಅವರಿಗೆ ಇಡೀ ವಿಶ್ವವನ್ನೇ ಕೊಡಬಯಸುತ್ತೇನೆ. ಒಂದೇ ಬೈಠಕಿನಲ್ಲಿ ನಾನು ಅದನ್ನು ಮಾಡಬಲ್ಲೆ. ಆದರೆ ಅವರು ನನ್ನ ಬಳಿಗೆ ಬರುವುದೆಲ್ಲಾ ಏನೆಂದರೆ ತಮ್ಮ ದುಃಖ, ತಮ್ಮ ಅನಾರೋಗ್ಯ ಮತ್ತು ನನ್ನ ಮೇಲಿನ ಕೋಪ." "ನೋಡಿದಿರಾ? ದಿವ್ಯಲೋಕದಲ್ಲಿ ತಮ್ಮ ಗುರುಗಳನ್ನು ಹೇಗೆ ಎದುರಿಸುವುದೆಂಬುದು ಅವರಿಗೆ ತೀವ್ರ ನಿರಾಶೆಯ ಕ್ಷಣವಾಗಿತ್ತು. ಕೋರಿಕೆಗಳನ್ನು ತಿರಸ್ಕರಿಸದೆ ಅಥವಾ ಇಲ್ಲವೆನ್ನದೆ, ಅವರು ಎಲ್ಲದಕ್ಕೂ ಸರಿ ಎಂದರು."

ಗುರುಗಳು ಮಾರ್ಚ್ 23ರಂದು ಚೆನ್ನೈಗೆ ಹೊರಟರು.



### ವಿಶಾಖಪಟ್ಟಣ,ಆಂಧ್ರಪ್ರದೇಶ

ಮಾರ್ಚ್ 25ರಂದು ಚೆನ್ನೈನಿಂದ ವಿಶಾಖಪಟ್ಟಣಕ್ಕೆ ಬಂದು ಸೇರಿದರು. ಅವರು ವಿಮಾನ ನಿಲ್ದಾಣದಲ್ಲಿ ಮೌನವಾಗಿ, ಸಾಲಾಗಿ ನಿಂತಿದ್ದ 150 ಅಭ್ಯಾಸಿಗಳಿಂದ ಸ್ವಾಗತಿಸಲ್ಪಟ್ಟರು. ಗುರುಗಳು ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು ಹಾಗೂ ಆಶ್ರಮದ ಬಳಿಯಿದ್ದ ಅತಿಥಿ ಗೃಹದಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದರು. ಸಹಜಮಾರ್ಗದ ಆಧ್ಯಾತ್ಮಿಕ ಪ್ರತಿಷ್ಠಾಪನೆಯ(ಎಸ್ ಎಮ್ ಎಸ್ ಎಫ್)ಹೆಸರಿನಲ್ಲಿ 9.09 ಎಕರೆ ಭೂಮಿಯನ್ನು ನೋಂದಾಯಿಸಿದರು. ವಿಶಾಖಪಟ್ಟಣದಿಂದ 25 ಕಿಮೀ ದೂರದಲ್ಲಿರುವ ಈ ಪ್ರದೇಶದಲ್ಲಿ ಅಭ್ಯಾಸಿಗಳ ವಸತಿಗಾಗಿ ಯೋಜನೆ ಮಾಡಲಾಗಿದೆ. ಸಂಜೆ 4.30ಕ್ಕೆ ಆಶ್ರಮದಲ್ಲಿ ಸೇರಿದ್ದ ಸುಮಾರು 3000 ಅಭ್ಯಾಸಿಗಳಿಗೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ನೀಡಿದ ಭಾಷಣದಲ್ಲಿ ಗುರುಗಳು ಬಾಬೂಜಿಯವರು ಸಹಜಮಾರ್ಗದ ಇದುವರೆಗಿನ ಅಭ್ಯಾಸದಲ್ಲಿ ಯಾವುದೇ ಕೂಡಿಕೆ ಹಾಗೂ ತೆಗೆಯುವಿಕೆಯಿಲ್ಲದೆ ಪರಿಪೂರ್ಣತೆಯ ಬಗೆಗೆ ನೀಡಿರುವ ಸಂದೇಶವನ್ನು ಉಲ್ಲೇಖಿಸಿದರು. ಅವರ ಅಭ್ಯಾಸಿಗಳು ಹಿಂದಿನ ಸಾಂಪ್ರದಾಯಿಕ ಆಚರಣೆಗಳಿಂದ ಮುಕ್ತರಾಗಬೇಕು ಹಾಗೂ ಸಹಜಮಾರ್ಗವು ಅವರನ್ನು ಉತ್ತಮರನ್ನಾಗಿ ಪರಿವರ್ತಿಸುವಲ್ಲಿ ಅವಕಾಶ ಮಾಡಿಕೊಡಬೇಕೆಂದು ಪ್ರೇರೇಪಿಸಿದರು.

ಗುರುಗಳು ರಾತ್ರಿಯನ್ನು ನಗರದಿಂದ ದೂರವಿರುವ "ಫಾರಂ ಹೌಸ್"ನಲ್ಲಿ ಕಳೆದರು, ಹಾಗೂ ಮರುದಿನ ಮಾರ್ಚ್ 26ರಂದು ಬೆಳಿಗ್ಗೆ 10 ಗಂಟೆಗೆ ಚೆನ್ನೈಗೆ ಮರಳಿದರು.

ಏಪ್ರಿಲ್ 5ರಂದು ಗುರುಗಳು **ತಿರುಚಿಗೆ** ಬಂದರು. ಅನೇಕ ಕೇಂದ್ರಗಳಿಂದ ಸೇರಿದ್ದ ಸುಮಾರು 300 ಅಭ್ಯಾಸಿಗಳು ಗುರುಗಳನ್ನು ಬರಮಾಡಿಕೊಳ್ಳಲು ಕಾಯುತ್ತಿದ್ದರು. ಗುರುಗಳು ಅವರೆಲ್ಲರನ್ನು ನೋಡಿ ಸಂತೋಷಗೊಂಡರು. ಹಾಗೂ ಜಾನಕಿ ಫಾರಂಗೆ ತೆರಳಿದರು– ಅವರು ಇಲ್ಲಿ ಒಂದು ವಾರ ತಂಗಿದ್ದರು. ಹಾಗೂ ಏಪ್ರಿಲ್ 12ರಂದು ಗುರುಗಳು ತಿರುಚಿಯ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ 7.30ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ದಿಂಡಿಗಲ್‌ನ ಮಾರ್ಗವಾಗಿ ತಿರುಪ್ಪೂರ್‌ಗೆ ಪ್ರಯಾಣ ಬೆಳೆಸಿದರು.

ಮಾರ್ಗ ಮಧ್ಯದಲ್ಲಿ 11 ಗಂಟೆಗೆ ದಿಂಡಿಗಲ್‌ನಲ್ಲಿ ಅರ್ಧ ಗಂಟೆಯ ಕಾಲ ಒಬ್ಬ ಅಭ್ಯಾಸಿಯ ಮನೆಯಲ್ಲಿ ತಂಗಿದ್ದರು. ದಿಂಡಿಗಲ್, ಚೆನ್ನಲಪಟ್ಟಿ ಹಾಗೂ ಬಟ್ಲಗೂಡು ಕೇಂದ್ರಗಳಿಂದ ಬಂದಿದ್ದ ಅಭ್ಯಾಸಿಗಳು ಗುರುಗಳನ್ನು ಬರಮಾಡಿಕೊಂಡರು.

40 ವರ್ಷಗಳ ಹಿಂದೆ ಗುರುಗಳಿಂದಲೇ ಆರಂಭಿಸಲ್ಪಟ್ಟಿದ್ದ ಕೆಲ ತಿಂಗಳುಗಳ ಹಿಂದಷ್ಟೇ ಪುನರಾರಂಭವಾಗಿರುವ ಚೆನ್ನಲಪಟ್ಟಿ ಕೇಂದ್ರದ ಅಭ್ಯಾಸಿಗಳನ್ನು ಭೇಟಿ ಮಾಡಿ ಗುರುಗಳು ಬಹಳ ಸಂತೋಷಗೊಂಡರು.

ಮಾರ್ಗ ಮಧ್ಯದಲ್ಲಿ ಕಾಯುತ್ತಿದ್ದ ಧಾರಾಪುರಂನ 125 ಅಭ್ಯಾಸಿಗಳನ್ನು ಭೇಟಿ ಮಾಡಲು ಗುರುಗಳು ಸ್ವಲ್ಪ ಹೊತ್ತಿನವರೆಗೆ ನಿಲ್ಲಿಸಿದರು. ಗುರುಗಳು ಸ್ವಲ್ಪ ಆಯಾಸ ಗೊಂಡಿದ್ದರು. ಹಾಗೂ ಮಧ್ಯಾಹ್ನ 1.30ಕ್ಕೆ ಅವರ ಊಟದ ಸಮಯಕ್ಕಿಂತ ತಡವಾಗಿ **ತಿರುಪ್ಪೂರ್** ಸೇರಿದರು. ಅಭ್ಯಾಸಿಯೊಬ್ಬ ಕಾಳಜಿಯಿಂದ ಬಿಸಿಲಿನಲ್ಲಿ ಅವರ ದೀರ್ಘ ಪ್ರಯಾಣದ ಬಗ್ಗೆ ಪರಿಶೀಲಿಸಿದಾಗ, ಗುರುಗಳು ಹೇಳಿದರು "ನಾವು ಸಂತೋಷದಿಂದಿರುವಾಗ ಆಹಾರ ಮತ್ತು ಆರಾಮದ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ."

ಸೋಮವಾರದಂದು ತಿರುಪ್ಪೂರ್‌ನ ಡೈಮಂಡ್ ಜ್ಯೂಬಲಿ ಪಾರ್ಕ್‌ನಲ್ಲಿ ಕೇರಳವನ್ನು ಸೇರಿದಂತೆ ಅನೇಕ ಕೇಂದ್ರಗಳಿಂದ ಬಂದಿದ್ದ ಸುಮಾರು 2500 ಅಭ್ಯಾಸಿಗಳು ಸೇರಿದ್ದರು. ಗುರುಗಳು ಬಹುತೇಕ ಪ್ರತಿದಿನವೂ ಸತ್ಸಂಗವನ್ನು ನಡೆಸಿಕೊಡುತ್ತಿದ್ದರು.

ಏಪ್ರಿಲ್ 15 ಬುಧವಾರದಂದು, ಗುರುಗಳು ಉದುಮಾಲ್‌ಪೇಟೆಗೆ ಭೇಟಿನೀಡಿ ಪ್ರಸ್ತಾಪಿಸಿದ್ದ ಧ್ಯಾನ ಮಂದಿರ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಇದು ಒಂದು ಪುಟ್ಟ ಪಟ್ಟಣವಾಗಿದೆ. ಮತ್ತು ಸಹಜಮಾರ್ಗವು ಇಲ್ಲಿ ಸುಮಾರು 2 ದಶಕಗಳಿಂದ ಬೆಳೆಯುತ್ತಿದೆ. ಅಭ್ಯಾಸಿಯೊಬ್ಬರು ಕೇಳಿದ ಪ್ರಶ್ನೆಗೆ, ಈ ಪಟ್ಟಣಕ್ಕೆ ಟಿಟಿಕೆ ಗುಂಪಿನ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾಲದಲ್ಲಿ ಅನೇಕ ಬಾರಿ ಭೇಟಿ ನೀಡಿರುವೆನೆಂದು ಗುರುಗಳು ಹೇಳಿದರು. ಗುರುಗಳು ಎಲ್ಲೆಲ್ಲಿ ಭೇಟಿ ನೀಡಿರುವರೋ ಅಲ್ಲೆಲ್ಲ ಕೇಂದ್ರಗಳಿವೆ ಮತ್ತು ಪ್ರಶಿಕ್ಷಕರಿದ್ದಾರೆ ಎಂಬುದು ಬಹಳ ಸ್ಪಷ್ಟವಾಗಿದೆ. ತಿರುಪ್ಪೂರ್‌ನಲ್ಲಿ ಇರುವಾಗ ಗುರುಗಳ ಈ ವರ್ಷ ಪ್ರಕಟವಾಗುತ್ತಿರುವ ಡಿವಿಡಿಗಾಗಿ ಎರಡು ಭಾಷಣಗಳನ್ನು ಮುದ್ರಣ ಮಾಡಲು ಸಮಯ ಕಂಡುಕೊಂಡರು.

ಏಪ್ರಿಲ್ 18– ಶನಿವಾರ ಬೆಳಿಗ್ಗೆ 10.30ಕ್ಕೆ ಗುರುಗಳು **ಕೃಷ್ಣಗಿರಿಗೆ** ಹೊರಟರು ಹಾಗೂ ಅವರು ಮಧ್ಯಾಹ್ನದ ಭೋಜನವನ್ನು ಈರೋಡ್‌ನಲ್ಲಿ ತೆಗೆದುಕೊಂಡರು. ಸಂಜೆ 4.30ಕ್ಕೆ ಕೃಷ್ಣಗಿರಿಯನ್ನು ತಲುಪಿದರು. ಮರುದಿನ ಬೆಳಿಗ್ಗೆ ಅವರು ಧ್ಯಾನ ಮಂದಿರದ ಉದ್ಘಾಟನೆಯನ್ನು ಮಾಡಿದರು ಮತ್ತು ಅಲ್ಲಿ ಸೇರಿದ್ದ ಸುಮಾರು 400 ಅಭ್ಯಾಸಿಗಳಿಗೆ ಭಾಷಣವನ್ನು ನೀಡಿದರು.





### ಬೆಂಗಳೂರು

ಏಪ್ರಿಲ್ 19 ಭಾನುವಾರದಂದು ಗುರುಗಳು ಕೃಷ್ಣಗಿರಿಯಿಂದ ಬೆಂಗಳೂರಿನ ಪರಂಧಾಮ ಆಶ್ರಮಕ್ಕೆ ಬಂದು ಸೇರಿದರು. ಪರಂಧಾಮ ಆಶ್ರಮವು ನಿವಾಸಗಳ ಆವರಣದಲ್ಲಿರುವುದರಿಂದ ಕೇಂದ್ರವು ಬೆಂಗಳೂರಿನ ವಿವಿಧ ಪ್ರದೇಶಗಳ ಅಭ್ಯಾಸಿಗಳಿಗೆ ಹಾಗೂ ಕರ್ನಾಟಕದ ವಿವಿಧ ಕೇಂದ್ರಗಳ ಅಭ್ಯಾಸಿಗಳಿಗೆ ಪ್ರತ್ಯೇಕ ದಿನಗಳಲ್ಲಿ ಆಶ್ರಮವನ್ನು ಭೇಟಿ ಮಾಡುವಂತೆ ವ್ಯವಸ್ಥೆ ಮಾಡಲಾಗಿತ್ತು.

20ರಂದು ಗುರುಗಳು 5 ಮದುವೆಗಳನ್ನು ನಡೆಸಿಕೊಟ್ಟರು. ಅವರು ಸಂತೋಷವಾಗಿಯೂ ಆರೋಗ್ಯವಾಗಿಯೂ ಕಂಡರು. ತಿರುಪ್ಪೂರ್‌ನಂತೆ ಇಲ್ಲಿಯೂ ಅವರು ತಮ್ಮ ಭಾಷಣಗಳನ್ನು ಮುದ್ರಣ ಮಾಡುವುದರಲ್ಲಿ ನಿರತರಾಗಿದ್ದರು. ಅವರು ಪರಂಧಾಮದಲ್ಲಿರುವ ನಿವಾಸಿಗಳನ್ನು ಸಂತೋಷಗೊಳಿಸಲು ಬಹುತೇಕ ಎಲ್ಲಾ ಕೊಠಡಿಗಳಿಗೂ ಭೇಟಿನೀಡಿದರು.





ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಪ್ರಧಾನ ಕೇಂದ್ರ ವಾರ್ತೆ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

## ಹೊಸ ಪ್ರಕಟಣೆಗಳು

### ಋತುವಾಣಿ(ಮರಾಠಿ)




ಬಾಬೂಜಿಯವರ ಭಾಷಣಗಳ ಲೇಖನಗಳ ಹಾಗು ಪತ್ರಗಳಿಗೆ ಪ್ರತ್ಯುತ್ತರಗಳ ಸಂಗ್ರಹವಾದ ಈ ಪುಸ್ತಕವು ಮೂಲವಾಗಿ 1981ರಲ್ಲಿ ಪ್ರಕಟಗೊಂಡಿತು. ಪ್ರೀತಿಯ ರಾಮಚಂದ್ರಜೀಯವರು ಅವರಿಗೆ ಬಹಳ ಹತ್ತಿರವಾದವರಿಗೆ ಹೇಳಿರುವಂತೆ ಹಾಗೂ ಸಾರ್ವಜನಿಕರಿಗೂ ಹೇಳಿರುವ ಆಧ್ಯಾತ್ಮದ ನಿಜವಾದ ತಿಳುವಳಿಕೆಯೊಂದಿಗೆ ಸಂಬಂಧ ಕಲ್ಪಿಸಿದ್ದಾರೆ.

### ಸಹಜಮಾರ್ಗದ ಮಾಹಿತಿ ಕೈಪಿಡಿ




ಈ ಮಾಹಿತಿ ಕೈಪಿಡಿಗಳು ಸಹಜಮಾರ್ಗ ಪದ್ಧತಿಯ ಧ್ಯಾನ ಮತ್ತು ಸಾಧನೆಯ ಬಗೆಗೆ ಸರಿಯಾದ ರೀತಿಯಲ್ಲಿ ಆಧ್ಯಾತ್ಮಿಕ ಆಕಾಂಕ್ಷಿಗಳೊಂದಿಗೆ ಹಂಚಿಕೊಳ್ಳಬಹುದೆಂದು ಸಲಹೆ ನೀಡಲಾಗಿದೆ. ಇದು ಸಹಜಮಾರ್ಗ ಸಾಧನೆಯ ಪ್ರಮುಖ ಲಕ್ಷಣಗಳನ್ನು ಹಾಗೂ ಸ್ಥಳೀಯ ಸಂಪರ್ಕದ ವಿವರಗಳನ್ನು ಒಳಗೊಂಡಿರುತ್ತದೆ. ಹಾಗೂ ಸಹಜಮಾರ್ಗ ವಿಚಾರ ವಿನಿಮಯ ಸಭೆಗಳಲ್ಲಿ ಭಾಗವಹಿಸುವವರಿಗೆ ಕೈಪಿಡಿಯಾಗಿ ಕೊಡಬಹುದಾಗಿದೆ. ಈ ಕೈಪಿಡಿಯನ್ನು ಈಗಾಗಲೇ ಆಂಗ್ಲಭಾಷೆಯಲ್ಲಿ ಪ್ರಕಟಿಸಲಾಗಿದ್ದು 2009ರ ಮೇ ತಿಂಗಳಿನಲ್ಲಿ ಹಿಂದಿ, ತಮಿಳು, ತೆಲುಗು, ಕನ್ನಡ, ಬಂಗಾಳಿ ಮತ್ತು ಅಸ್ಸಾಂ ಭಾಷೆಗಳಲ್ಲಿ ಪ್ರಕಟವಾಗಲಿದೆ.

### ಕಾನ್ಸ್ಟೆಂಟ್ ರಿಮೆಂಬರೆನ್ಸ್ ಏಪ್ರಿಲ್ 2009




ಇದರ ಪರಿವಿಡಿಯು "ನೀವು ಬದಲಾಗುವುದರ ಮೂಲಕ ಪ್ರಪಂಚವನ್ನು ಬದಲಾಯಿಸಿ" ಎಂಬ ಗುರುಗಳ ಭಾಷಣವನ್ನು ಸಂಬಂಧಗಳ ಬಗೆಗೆ ಪಿ.ಆರ್.ಕೃಷ್ಣ ಅವರಿಂದ ಲೇಖನವನ್ನು ಮತ್ತು ಧನ್ಯತಾಭಾವದ ಬಗೆಗೆ ವಿಷಯ ವಿಭಾಗವನ್ನು ಒಳಗೊಂಡಿದೆ. ವಿಶ್ವದೆಲ್ಲೆಡೆ ಸಹಜಮಾರ್ಗ ಈ ವಿಭಾಗವು ಮಧ್ಯಪ್ರದೇಶದ ಭೋಪಾಲದ ಆಶ್ರಮದ ಉದ್ಘಾಟನೆ ಬಗ್ಗೆ ಹಾಗೂ ಕೇರಳದ ಮಲಪುರಂನ ರಿಟ್ರೀಟ್ ಸೆಂಟರ್ ಬಗೆಗೆ ಲೇಖನಗಳನ್ನು ಹೊಂದಿದೆ.

### ಹಿಂದಿಯಲ್ಲಿ ಅಭ್ಯಾಸಿಗಳ ತರಬೇತಿ ಕಾರ್ಯಕ್ರಮ

ಷಹಜಹಾನ್‌ಪುರ ಆಶ್ರಮದಲ್ಲಿ ಪ್ರತಿ ತಿಂಗಳ ಎರಡನೇ ವಾರ ಸಾಧನಾ ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಡಲಾಗುತ್ತದೆ. ತರಬೇತಿ ಮಂಗಳವಾರ ಸಂಜೆ 4 ಗಂಟೆಗೆ ಪ್ರಾರಂಭವಾಗಿ ಮುಂದಿನ ಭಾನುವಾರ ಮಧ್ಯಾಹ್ನ 12 ರವರೆಗೆ ನಡೆಯುತ್ತದೆ. ಮುಂಬರುವ ಕಾರ್ಯಕ್ರಮಗಳ ವೇಳಾಪಟ್ಟಿ.

1. 7ರಿಂದ 12ರವರೆಗೆ ಜುಲೈ 2009
2. 3ರಿಂದ 9ರವರೆಗೆ ಆಗಸ್ಟ್ 2009
3. 8ರಿಂದ 13ರವರೆಗೆ ಸೆಪ್ಟೆಂಬರ್ 2009
4. 6ರಿಂದ –11ರವರೆಗೆ ಅಕ್ಟೋಬರ್ 2009

ದಯಮಾಡಿ ಅರ್ಜಿಯನ್ನು ಈ ವಿಳಾಸಕ್ಕೆ ಕಳುಹಿಸಿ: ಪ್ರಭಾತ್ ಕುಮಾರ್, ಬಾಂಕೇ ಗಂಜ್(ಪೋ)
ಲಖಿಮ್‌ಪುರ್ ಖೇರಿ(ಜಿ) –262801,
ಇ–ಮೇಲ್ prabhatksrcm@gmail.com

## ಘೋಷಣೆಗಳು

### ನಮ್ಮ ಪ್ರೀತಿಯ ಗುರುಗಳ 83ನೇ ಜನ್ಮದಿನದ ಆಚರಣೆ

ಜುಲೈ 23ರಿಂದ 25ರವರೆಗೆ
ಭರವಸೆಯ ಮತ್ತು ಸುಯೋಗದ ಯುಗ

"...ಈ ಜನ್ಮ ದಿನಾಚರಣೆಗೆ ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಿ ಇದು ನನ್ನ ಮಗನಿಗೆ ಅಭ್ಯಾಸಿಗಳ ಹೃದಯದಲ್ಲಿ ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಆತನು ಪ್ರೀತಿಪಾತ್ರನಾಗಿದ್ದಾನೆ ಹಾಗೂ ಆತನ ಕಾರ್ಯಗಳು ನಮ್ಮ ನಿರೀಕ್ಷೆಗೂ ಮೀರಿ ಪ್ರತಿಫಲ ಹೊಂದುತ್ತಿದೆ. ಭೂಮಿಯ ಮೇಲೆ ಆತನು ಹುಟ್ಟಿದ ಮಂಗಳಕರ ದಿನವು ಸಂಸ್ಥೆಯ ಇತಿಹಾಸದಲ್ಲಿಯೇ ಮರೆಯಲಾಗದಂತಹ ಸಂಗತಿಯಾಗಿದೆ. ಇದು ಒಂದು ಜ್ವಾಲೆಯಂತೆ ಪ್ರಕಾಶಮಾನವಾಗಿ ಹೆಚ್ಚಿನ ಮಹತ್ವವುಳ್ಳದ್ದಾಗಿದೆ. ಇಂತಹ ಅಸಾಧಾರಣವಾದ ಸೃಷ್ಟಿಯೊಂದಿಗೆ ಇದ್ದು ನೀವು ಮತ್ತೊಮ್ಮೆ ಈ ಅವಕಾಶವನ್ನು ಪಡೆದಿರುವುದಕ್ಕಾಗಿ ಸಂತೋಷ ಹೊಂದಿರಿ..."-ಬಾಬೂಜಿ ಮಹಾರಾಜರು, ದಿವ್ಯ ಲೋಕದಿಂದ ಪಿಸುಮಾತುಗಳು

ಪ್ರೀತಿಯ ಗುರುಗಳ ಅವರ 83ನೇ ಜನ್ಮದಿನವನ್ನು ತಿರುಪ್ಪೂರ್‌ನಲ್ಲಿ ಆಚರಿಸಲು ಅನುಮತಿ ನೀಡಿದಕ್ಕಾಗಿ ನಾವು ತುಂಬಾ ಅಭಾರಿಗಳಾಗಿದ್ದೇವೆ ಮತ್ತು ಸಂತುಷ್ಟರಾಗಿದ್ದೇವೆ. ಇದರ ಆಹ್ವಾನ ಪತ್ರಿಕೆಯನ್ನು ಮಿಶನ್ನಿನ ಕೆಳಕಂಡ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.
http://www.srcm.org/members/24july2009/index.jsp
ಉತ್ಸವವನ್ನು ಕುರಿತಾಗಿ, ನೋಂದಣಿ, ಆರಾಮ ಶಯನಗೃಹ ಇತ್ಯಾದಿಗಳ ಬಗ್ಗೆಯೂ ಇತ್ತೀಚಿನ ಮಾಹಿತಿಗಳನ್ನು ಸಹ ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಜೂನ್ 15, 2009ರ ಒಳಗೆ ಅಭ್ಯಾಸಿಗಳ ನೋಂದಣಿ ಮಾಡಿಕೊಳ್ಳಬೇಕಾಗಿ ವಿನಂತಿ. ಯಾವುದೇ ಸ್ಪಷ್ಟೀಕರಣ ಬೇಕಿದ್ದರೆ ಉತ್ಸವದ ವ್ಯವಸ್ಥಾಪಕರನ್ನು 24ಜುಲೈ ಹೆಲ್ಪ್ ಡೆಸ್ಕ್ ಮೂಲಕ ದಯಮಾಡಿ ಮುಕ್ತವಾಗಿ ಸಂಪರ್ಕಿಸಿ.

### ಎಸ್.ಎಮ್.ಆರ್.ಟಿ.ಐ.ನ ಕಾರ್ಯ ನಿರ್ವಾಹಕರು

ಸಹಜಮಾರ್ಗ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಎಸ್ ಎಮ್ ಎಸ್ ಎಫ್ ನ ಸಂಶೋಧನೆ ಹಾಗೂ ತರಬೇತಿ ಶಾಖೆಯಾಗಿ ಸ್ಥಾಪಿತವಾಗಿದೆ. ಈ ಕೆಳಕಂಡವರನ್ನು ನಮೂದಿಸಿದ ಕಾರ್ಯಗಳಿಗೆ ನೇಮಿಸಲಾಗಿದೆ.

ಡಾ. ಕೆ.ಎಸ್ ಬಾಲಸುಬ್ರಮಣ್ಯ – ನಿರ್ದೇಶಕ, ಸಂಶೋಧನೆ (sanskritkannan@yahoo.com)
ತರಬೇತಿ ಸಾಮಗ್ರಿಯ ರೂಪಣ – ಲಲಿತಾ ಶ್ರೀನಿವಾಸನ್
ವಿದ್ಯಾರ್ಥಿವೇತನ ತರಬೇತಿ ಕಾರ್ಯಕ್ರಮ– ಡಾಲಿ ನಿಕೊಲೈ
ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ – ಎನ್ ಪ್ರಕಾಶ್
ಎನ್ ಪದ್ಮನಾಭನ್ – ನಿರ್ದೇಶಕರು, ಭಾರತದ ಕಾರ್ಯಕ್ರಮಗಳು (padu@srcm.org)

ಯುವ ಕಾರ್ಯಕ್ರಮ(ಎ ಎಮ್ ಸಿ ತರಬೇತಿ)–
ಎಸ್ ಪ್ರಕಾಶ್
ಮಕ್ಕಳ ತರಬೇತಿ ಕಾರ್ಯಕ್ರಮ–
ವಿ. ಮಧುಮತಿ ಮತ್ತು ಲೀ ರಿಬ್
ಅಭ್ಯಾಸಿ ತರಬೇತಿ ಕಾರ್ಯಕ್ರಮ(ಪ್ರವೇಶಿತ)–
ಎ ರಾಮಕೃಷ್ಣನ್
ಅಭ್ಯಾಸಿ ತರಬೇತಿ ಕಾರ್ಯಕ್ರಮ(ವ್ಯವಸ್ಥಿತ)–
ಅನಸೂಯ ರಾಮಚಂದ್ರನ್
ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ –
ಸೀತಾ ಕುಂಚಿತಪಾದಂ ಮತ್ತು ರಂಗರಾಜು ಮಾಧುರಿ
ಪ್ರಬಂಧ ಸ್ಪರ್ಧೆ –
ಪುನಿತ್ ಲಾಲ್ ಭಾಯಿ, ಲಲಿತ್ ರಾಜಗೋಪಾಲ್ ಮತ್ತು ವಿಶಾಲ್ ಮೆಹ್ತಾ
ಬೋಧಕರ ತರಬೇತಿ ಕಾರ್ಯಕ್ರಮ –
ಲಿರ್ಝ್ ಕಿಂಗ್ಸ್ ನಾರ್ತ್

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3









ಜನವರಿ 15ರಿಂದ –17ರವರೆಗೆ ಸತ್ಖೋಲ್ ಕೇಂದ್ರದಲ್ಲಿ 3 ದಿನದ ವಿಬಿಎಸ್‌ಇ ತರಬೇತಿ ಕಾರ್ಯಕ್ರಮವನ್ನು ಉತ್ತರಾಖಂಡ್ ವಲಯದ ಶಿಕ್ಷಕರಿಗೆ ತರಬೇತಿ ನೀಡುವುದರ ಸಲುವಾಗಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದವರು, ಸುಮಾರು 40 ಅಭ್ಯಾಸಿಗಳು, ಅನೇಕ ಮೌಲ್ಯಗಳ ಕುರಿತ ಅಧ್ಯಾಯಗಳಲ್ಲಿ ತಯಾರಿ ನಡೆಸಿ ಪ್ರೇಕ್ಷಕರ ಮುಂದೆ ಪ್ರದರ್ಶಿಸಿದರು. ಅವರು ಈ ಮೌಲ್ಯಗಳನ್ನು ದಿನನಿತ್ಯದ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಕುರಿತು ಚರ್ಚಿಸಿದರು. ಅವರ ಅನೇಕ ಕಥೆಗಳನ್ನು ಚಟುವಟಿಕೆಗಳನ್ನು, ಆಟಗಳನ್ನು ಪ್ರಯೋಗಗಳನ್ನು ಸಂಗ್ರಹಿಸಿ ಮೌಲ್ಯಗಳ ನೈಜವಾದ ಪರಿಣಾಮವನ್ನು ತಿಳಿಸಿಕೊಟ್ಟರು. ಕಾರ್ಯಕ್ರಮವು ವಿ.ಬಿ.ಎಸ್.ಇ.ಯ ಪಠ್ಯಕ್ರಮವನ್ನು ಪ್ರಾಯೋಗಿಕವಾಗಿ ಕಲಿತುಕೊಳ್ಳುವುದನ್ನು ಒಳಗೊಂಡಿತ್ತು.

## ವಿ.ಬಿ.ಎಸ್.ಇ ಕಾರ್ಯಕ್ರಮಗಳು

ತಮಿಳುನಾಡಿನ ಥೇಣಿಯಲ್ಲಿರುವ ನಾಡಿಗಾರ್ ಸರಸ್ವತಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ 3 ದಿನದ ವಿ.ಬಿ.ಎಸ್.ಇ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಎಸ್.ಎಮ್.ಆರ್.ಟಿ.ಐ ನ ಆಯೋಜಕರಾದ ಸಹೋದರಿ ಸೀತಾ ಕುಂಜಿತಪಾದಂರವರು ಹಾಗೂ ಕೊಯಮತ್ತೂರಿನ ಸಹೋದರಿ ಸುಬ್ಬುಲಕ್ಷ್ಮಿಯವರ ಜತೆಗೂಡಿ ಕಾರ್ಯಕ್ರಮವನ್ನು ನಡಿಸಿಕೊಟ್ಟರು. ಮೌಲ್ಯಾಧಾರಿತ ಜೀವನ ಚಾರಿತ್ರ್ಯ ಹಾಗೂ ದೃಷ್ಟಿಕೋನ , ಒತ್ತಡದ ನಿರ್ವಹಣೆ ಸಂಕಲ್ಪ ಹಾಗೂ ಅವಿರತ ಪ್ರಯತ್ನ ಮೌಲ್ಯಗಳಾವುವು? ನಾಯಕತ್ವದ ಗುಣಗಳೇನು ಹಾಗೂ ಮಾನವ ಜೀವನದ ಗುರಿ ಏನು ಎಂಬ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಬಿ.ಎಡ್ ವಿದ್ಯಾರ್ಥಿಗಳಿಗೆ ಅಧಿಕೃತವಾಗಿ "ಶಿಕ್ಷಕರ ಪಾತ್ರ" ಹಾಗೂ "ಒತ್ತಡದ ನಿರ್ವಹಣೆ" ವಿಷಯಗಳ ಬಗೆಗೆ ತಿಳಿಸಲಾಯಿತು. ಉಪನ್ಯಾಸಕರಿಗೆ ಹೇಳಿದ ವಿಷಯಗಳೆಂದರೆ "ಶಿಕ್ಷಕರ ತರಬೇತುದಾರರ ಪಾತ್ರ", "ಶಿಕ್ಷಕರ ಪಾತ್ರ" ಮೌಲ್ಯಗಳನ್ನು ಆಚರಣೆಯಲ್ಲಿ ತರುವುದು ಹೇಗೆ?" ಒತ್ತಡದ ನಿರ್ವಹಣೆ" "ವಿಶ್ರಾಂತಿ ಪಡೆಯುವುದು" "ಧ್ಯಾನ" ಹಾಗೂ ಚಾರಿತ್ರ್ಯ ನಿರ್ಮಾಣ" ಕಾರ್ಯಕ್ರಮವನ್ನು ಉಪನ್ಯಾಸಕರಿಗೆ ಹಾಗೂ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದರೂ ಸಹ, ಚಾಲಕರು, ಸೇವಕರು, ಶಿಕ್ಷಕೇತರ ಸಿಬ್ಬಂದಿಯವರೂ ಸಹ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಅವರ ಕಡೆಯಿಂದ ಪ್ರತಿರೋಧವಿದ್ದರೂ ಮುಗಿಯುವುದರೊಳಗೆ ಅನೇಕರು ಬದಲಾದದ್ದು ಗೋಚರವಾಗುತ್ತಿತ್ತು. ಚಾಲಕರು ಮತ್ತು ಶಿಕ್ಷಕೇತರ ಸಿಬ್ಬಂದಿಯವರಿಗೆ ಹೇಳಿದ ವಿಷಯಗಳೆಂದರೆ "ಬಾಲಕಿಯರ ಕಾಲೇಜಿನಲ್ಲಿ ಪುರುಷ ಚಾಲಕರ ಪಾತ್ರ" ಹಾಗೂ "ಜೀವನಕ್ಕೆ ಮೌಲ್ಯಗಳು" ಕಾರ್ಯಕ್ರಮದಲ್ಲಿ ಪ್ರಯೋಗಗಳು ಹಾಗೂ ಚಟುವಟಿಕೆಗಳು ಎಲ್ಲರಿಗೂ ಒಂದು ವಿನೂತನ ಅನುಭವವಾಗಿತ್ತು ಹಾಗೂ ಪ್ರಶಂಸನೀಯವಾಗಿತ್ತು.



## ಆಸಕ್ತಿಕರ ಭೇಟಿ

2009 ಜನವರಿ 5 ರಂದು ಯು.ಎಸ್.ಎ ಕ್ಯಾಲಿಫ್ಲೋರ್ನಿಯಾದ ವಾಲಿಯಂಟ್ ವಿಶ್ವವಿದ್ಯಾಲಯದ ಮನೋವಿಜ್ಞಾನದ ವಿದ್ಯಾರ್ಥಿಗಳ ಗುಂಪೊಂದು ಚೆನ್ನೈ ಮಣಪಾಕ್ಕಂನ ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಭೇಟಿ ನೀಡಿದರು. ಸಹಜಮಾರ್ಗದ ಬಗ್ಗೆ ಹೆಚ್ಚಿನ ಜ್ಞಾನ ಹೊಂದುವುದು ಹಾಗೂ ನಡವಳಿಕೆಯು ಮನೋವಿಜ್ಞಾನದ ಮೇಲೆ ಅದರ ಪರಿಣಾಮವನ್ನು ತಿಳಿದುಕೊಳ್ಳುವುದು ಅವರಿಗೆ ಪ್ರವಾಸದ ಚಟುವಟಿಕೆಯ ಒಂದು ಭಾಗವಾಗಿತ್ತು. ಮೊದಲಿಗೆ ಆ ವಿದ್ಯಾರ್ಥಿಗಳಿಗೆ ಲೆಮೈಸ್ ಕೇಂಬ್ರಿಜ್ ಅಂತರಾಷ್ಟ್ರೀಯ ಶಾಲೆಯೂ ಸೇರಿದಂತೆ ಸುಂದರವಾದ ಆಶ್ರಮವನ್ನು ತೋರಿಸಲಾಯಿತು. ಅವರ ಅನೇಕ ಪ್ರಶ್ನೆಗಳಿಗೆ ಅವರಿಗೆ ಆಶ್ರಮವನ್ನು ತೋರಿಸುತ್ತಿದ್ದ ಅಭ್ಯಾಸಿಗಳು ಉತ್ತರಿಸಿದರು. ಸಹೋದರ ಎ.ಪಿ.ದುರೈರವರು ಅವರ ಪ್ರಶ್ನೆಗಳಿಗೆ ಸಹಜಮಾರ್ಗದ ಬಗ್ಗೆ ಹಾಗೂ ಮನೋವಿಜ್ಞಾನ ವಿದ್ಯಾರ್ಥಿಗಳಿಗೆ ಅದು ಹೇಗೆ ಅತ್ಯುಪಯುಕ್ತವಾಗಿದೆ ಎಂಬುದರ ಬಗೆಗೆ ಪ್ರೇರೇಪಣೆಯಿಂದ ತುಂಬಿದ್ದ ಭಾಷಣ ಮೂಲಕ ಉತ್ತರಿಸುತ್ತಾ ಅವರೊಂದಿಗೆ ಪ್ರತಿಸ್ಪಂದನದಲ್ಲಿ ಭಾಗವಹಿಸಿದರು. ಅತಿಥಿಗಳಿಗೆ ಮಧ್ಯಾಹ್ನದ ಭೋಜನವನ್ನು ನೀಡಲಾಯಿತು. ಅವರೆಲ್ಲರೂ ಆಶ್ರಮದಲ್ಲಿ ತಮ್ಮ ಸಮಯವನ್ನು ಅದ್ಭುತವಾಗಿ ಕಳೆದರು ಹಾಗೂ ಇನ್ನೂ ಹೆಚ್ಚಿನ ಕಾಲ ಉಳಿದುಕೊಳ್ಳಲು ಬಯಸಿದರು.

## ಮಣಪಾಕ್ಕಂ ಆಶ್ರಮಕ್ಕೆ ಎಂ.ಬಿ.ಎ ವಿದ್ಯಾರ್ಥಿಗಳ ಭೇಟಿ

ಮಾರ್ಚ್ 18ರಂದು ಐ.ಎಸ್.ಬಿ.ಆರ್ ಸ್ಕೂಲ್ ಆಫ್ ಬಿಸಿನೆಸ್‌ನ (ಮೋರೈಪಾಕ್ಕಂ,ಚೆನ್ನೈ)ಸುಮಾರು 60 ಎಂ.ಬಿ.ಎ ವಿದ್ಯಾರ್ಥಿಗಳು, ಪ್ರಾಂಶುಪಾಲರಾದ ಸತ್ಯ ಹಾಗೂ ಇತರ 3 ಶಿಕ್ಷಕರ ಸಂಗಡ ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಭೇಟಿ ನೀಡಿದರು. ಅವರಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಹೋದರ ಎ.ಪಿ.ದುರೈರವರು ಆಡಳಿತದ ಬಗ್ಗೆ ಗುರುಗಳ ಬೋಧನೆಗಳನ್ನು ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರ ಗುರುವಿನ ಅವಶ್ಯಕತೆಯನ್ನು ಕುರಿತು ಹಾಗೂ ಸಹಜಮಾರ್ಗದ ಸಾಧನೆಯನ್ನು ಕುರಿತು ಭಾಷಣ ನೀಡಿದರು. ವಿದ್ಯಾರ್ಥಿಗಳು ಬಹಳ ತಲ್ಲೀನರಾಗಿ ಕುಳಿತಿದ್ದರು. ಹಾಗೂ ಪ್ರಶ್ನೋತ್ತರ ವಿಭಾಗದಲ್ಲಿ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ವಿದ್ಯಾರ್ಥಿಗಳಿಂದ ಬಂದ ಪ್ರತಿಕ್ರಿಯೆಯು ಧನಾತ್ಮಕ ಹಾಗೂ ಪ್ರಶಂಸನೀಯವಾಗಿತ್ತು. ಪ್ರಾಂಶುಪಾಲರು ಮತ್ತು ಮತ್ತೊಬ್ಬ ಶಿಕ್ಷಕರು ಅಂದೇ ಪದ್ಧತಿಯನ್ನು ಶುರು ಮಾಡಿದರು. ಅವರಿಗೆ ಸರಳವಾದ ಮತ್ತು ರುಚಿಯಾದ ಭೋಜನವನ್ನು ಫಲಹಾರ ಮಂದಿರದಲ್ಲಿ ನೀಡಲಾಯಿತು. ಅವರಿಗೆ ಸಹಜಮಾರ್ಗದ ಕೈಪಿಡಿಗಳನ್ನು ನೀಡಿ ಅವಶ್ಯ ಬಿದ್ದರೆ ನಂತರದ ನೆರವನ್ನು ನೀಡುವ ಬಗೆಗೆ ಭರವಸೆ ನೀಡಲಾಯಿತು.



## ವಿ.ಬಿ.ಎಸ್.ಇ ಬೋಧಕರ ತರಬೇತಿ ಕಾರ್ಯಕ್ರಮ, ಬೆಂಗಳೂರು

2ದಿನದ ಬೋಧಕರ ರೂಪಣ ಕಾರ್ಯಕ್ರಮವು ಮಾರ್ಚ್ 28,29 ರಂದು ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ಜರುಗಿತು. 24 ಜನ ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದಿನದ ಮೊದಲಾರ್ಧದಲ್ಲಿ ಭಾಗವಹಿಸಿದ ಎಲ್ಲರಿಗೂ ವಿ.ಬಿ.ಎಸ್.ಇ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಪ್ರಸರಿಸುವುದು ಹೇಗೆ ಎಂಬುದರ ಬಗೆಗೆ ಹೇಳಲಾಯಿತು. ಕಾರ್ಯಕ್ರಮದ ಉಳಿದ ಭಾಗವನ್ನು ಸಹಜಮಾರ್ಗದ ಬೋಧನೆಗಳನ್ನು ಹಾಗೂ ವಿ.ಬಿ.ಎಸ್.ಇ ಬಗೆಗೆ ಆಳವಾದ ವಿಷಯಗಳನ್ನು ತಿಳಿಯುವುದಕ್ಕಾಗಿ ಸಂವಹನ ಕೌಶಲ್ಯದ ನಿರ್ಮಾಣಕ್ಕೆ ಕೇಂದ್ರೀಕರಿಸಲಾಯಿತು. ಸ್ವಯಂ ಸೇವೆಯ ಮಹತ್ವ, ಸ್ವಯಂ ಸೇವಕರ ಸರಿಯಾದ ಮನೋಭಾವ, ಸಾರ್ವಜನಿಕರೊಂದಿಗೆ ಪರಿಣಾಮಕಾರಿಯಾಗಿ ಮಾತನಾಡುವುದು ಇತ್ಯಾದಿ ವಿಷಯಗಳನ್ನು ಚರ್ಚಿಸಲಾಯಿತು. ಈಗಾಗಲೇ ಸಾರ್ವಜನಿಕರೊಂದಿಗೆ ಮಾತನಾಡಿ ಅನುಭವವಿರುವ ಅಭ್ಯಾಸಿಗಳ ಮಾರ್ಗದರ್ಶನದಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಒಂದು ಪ್ರಸ್ತುತಿ ಕೊಡಬೇಕಾಗಿ ಹೇಳಲಾಗಿತ್ತು. ಕಾರ್ಯಕ್ರಮವನ್ನು ತದನಂತರ ಅನುಷ್ಠಾನಕ್ಕೆ ತರಲು ಭಾಗವಹಿಸಿದ ಎಲ್ಲರಿಗೂ ಬರುವ ವರ್ಷದಲ್ಲಿ ಕನಿಷ್ಠ ಪಕ್ಷ 5 ಕಾರ್ಯಕ್ರಮಗಳನ್ನು ನಡೆಸಿಕೊಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲಾಯಿತು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

## ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ, ಮಲಂಪುರ



ಕೇರಳದ ಮಲಂಪುರ ರಿಟ್ರೀಟ್ ಕೇಂದ್ರದಲ್ಲಿ 14 ಮತ್ತು 15 ಮಾರ್ಚ್, 09ರಂದು ಒಂದು ಪ್ರಭಾವಶಾಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ತಮಿಳುನಾಡಿನ ಗ್ರಾಮೀಣ ಕೇಂದ್ರಗಳಾದ ವೇಲೂರು, ಅರ್ನಿ, ಪಾಂಡಿಚೆರಿ, ವಿರುಪ್ಪುರಂ, ಹೊಸೂರು, ಕೃಷ್ಣಗಿರಿ, ಧರ್ಮಪುರಿ, ಹರೂರು, ತಿರುಚ್ಚಿ ಮತ್ತು ಕರೂರು ಸೇರಿದಂತೆ ಅನೇಕ ಕೇಂದ್ರಗಳಿಂದ 37 ಪ್ರಶಿಕ್ಷಕರು ಭಾಗವಹಿಸಿದ್ದರು. ಸತ್ಯೋದಯ, ಪ್ರಶಿಕ್ಷಕರ ಮಾರ್ಗದರ್ಶಿ ಮತ್ತು ದಿವ್ಯಲೋಕದಿಂದ ಪಿಸುಮಾತುಗಳು ಪುಸ್ತಕಗಳಿಂದ ತೆಗೆದುಕೊಂಡ ಅಂಶಗಳನ್ನು ಉಪಯೋಗಿಸಿಕೊಂಡು ಈ ಕೆಳಗಿನ ವಿಷಯಗಳ ಮೇಲೆ ಪ್ರಸ್ತುತಿಗಳನ್ನು ಸಿದ್ಧಗೊಳಿಸಲಾಗಿತ್ತು.

ಸಹಜಮಾರ್ಗ ತತ್ವಗಳು ಮತ್ತು ಸಾಧನೆ ರಾಜೇಶ್ ರಾಠೋಡ್
ಪ್ರಶಿಕ್ಷಕರ ಪಾತ್ರ, ಹೊಣೆ ಮತ್ತು ಕರ್ತವ್ಯ ಎನ್. ಪ್ರಕಾಶ್
ದಿವ್ಯಲೋಕದಿಂದ ಪಿಸುಮಾತುಗಳು–ಒಂದು ದೈವಿಕ ಕೊಡುಗೆ – ಬಿ.ಜಿ. ಪ್ರಸನ್ನ ಕೃಷ್ಣ
ಪ್ರಶಿಕ್ಷಕರ ಕಾರ್ಯ,ಸ್ಪಷ್ಟೀಕರಣ ಜಿ. ರಾಜೀವ್
ಸಹಜಮಾರ್ಗ ಕುಟುಂಬ – ಎರಿಲಾರಸಿ
ಮುಕ್ತಾಯ ಹೇಳಿಕೆ– ಸಹೋದರಿ ಕಮಲಾಕ್ಷಿ ನಟರಾಜನ್

ಉತ್ತರ ತಮಿಳುನಾಡಿನ ವಲಯಾಧಿಕಾರಿ ಸೋದರ ಸಿ.ರಾಜಗೋಪಾಲನ್‌ರವರು ಪ್ರೇಕ್ಷಕರಲ್ಲೊಬ್ಬರಾಗಿದ್ದರು ಹಾಗೂ ತಮ್ಮ ಅನುಭವಗಳ ಕಾಣಿಕೆ ನೀಡಿದರು. ನಮ್ಮ ಸ್ವಂತ ಬದಲಾವಣೆಯೊಂದಿಗೆ ಇನ್ನೊಬ್ಬರ ಬದಲಾವಣೆಯಲ್ಲಿ ನಾವು ಸಾಧನವಾಗುವ ಬಗ್ಗೆ ಒತ್ತು ನೀಡಲಾಯಿತು. ನಾವು ಸಂಕಲ್ಪದೊಂದಿಗೆ ನಮ್ಮೊಳಗೆ ಅಗತ್ಯ ಬದಲಾವಣೆಗಳನ್ನು ತಂದು ನಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದರೆ ಪೂಜ್ಯ ಗುರುಗಳು ಖಂಡಿತವಾಗಿಯೂ ಸಂತೋಷಿಸುತ್ತಾರೆ.

**ಭೋಪಾಲ್** ಕೇಂದ್ರದಲ್ಲಿ 5ನೇ ಏಪ್ರಿಲ್‌ರಂದು ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಅಲ್ಲಿ ಇಂದೋರ್‌ನ ಆಶ್ರಮ ಉಸ್ತುವಾರಿ ಸಮಿತಿಯ ಸದಸ್ಯರು ಭೋಪಾಲದ ಅಭ್ಯಾಸಿಗಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಎರಡು ವರ್ಷಗಳ ಹಿಂದೆ ಗುರುಗಳು ಆಶ್ರಮದ ಸ್ವತ್ತುಗಳ ನಿರ್ವಹಣೆಗೆ ಈ ಸಮಿತಿಯನ್ನು ರಚಿಸಿದರು. ಸಮಿತಿಯಲ್ಲಿ ವಲಯಾಧಿಕಾರಿಗಳು, ಕೇಂದ್ರದ ಮುಖ್ಯಸ್ಥರು ಮತ್ತು ಆಶ್ರಮದ ನಿರ್ವಹಕರು ಸೇರಿದಂತೆ ಐವರು ಸದಸ್ಯರು ಇರುವರು. ಆಶ್ರಮ ಉಸ್ತುವಾರಿ ಸಮಿತಿಯ ಬಗ್ಗೆ ಅಭ್ಯಾಸಿಗಳಲ್ಲಿ ತಿಳುವಳಿಕೆ ಇಲ್ಲದ್ದರಿಂದ, ಈ ಕಾರ್ಯಕ್ರಮವು ಸಮಿತಿಯ ಪರಿಚಯ ಮಾಡಿಕೊಡಲು ಸಹಾಯ ಮಾಡಿದುದಲ್ಲದೆ ಆಶ್ರಮಗಳ ಆಡಳಿತ ಕಾರ್ಯಗಾನ್ನು ಸಮಿತಿಗೆ ವಹಿಸಿಕೊಡುವುದರ ಬಗ್ಗೆ ವಿಚಾರ ಮಾಡಲು ಸಹಾಯಮಾಡಿತು. ಸೋದರ ರಮಾಕಾಂತ್ ಅಗರ್‌ವಾಲ್ ಹಾಗೂ ಸೋದರ ರಾಜೇಶ್ ರವೇರ್ಕರ್‌ರವರು ತಾವು ಸಮಿತಿಯ ಸದಸ್ಯರಾಗಿ ದುಡಿದ ಅನುಭವಗಳನ್ನು ತೆರೆದಿಟ್ಟರು.

**ಸೋಲಾಪುರ ಆಶ್ರಮ**



29 ಮೇ 2008ರಂದು ಮಹಾರಾಷ್ಟ್ರದ ಸೋಲಾಪುರದಲ್ಲಿ ನಗರದಿಂದ ಕೇವಲ 5 ಕಿ.ಮೀ. ದೂರದ ಅಕ್ಕಲಕೋಟೆ ರಸ್ತೆಯಲ್ಲಿ 1.5 ಎಕರೆ ಭೂಮಿಯನ್ನು ಖರೀದಿಸಲಾಯಿತು.

15 ಏಪ್ರಿಲ್2009ರಂದು ಪೂರ್ವಭಾವಿ ನಿರ್ಮಾಣ ಕೆಲಸಗಳಾದ ಬೇಲಿ, ನೀರಿನ ಸೌಲಭ್ಯ, ವಿದ್ಯುತ್ ಪೂರೈಕೆ ಮತ್ತು ಕಾವಲುಗಾರನ ಮನೆ ಇತ್ಯಾದಿಗಳ ನಿರ್ಮಾಣಕ್ಕೆ ನಾಂದಿಯಾಗಿ ಭೂಮಿಪೂಜೆಯನ್ನು ನಡೆಸಲಾಯಿತು. ಉತ್ಸುಕ ಅಭ್ಯಾಸಿಗಳು ಆಶ್ರಮದ ಜಾಗದಲ್ಲಿ ಬೆಳಿಗ್ಗೆ 6 ಘಂಟೆಗೆ ಸೇರಿದ್ದರು. ಆರೂವರೆ ಘಂಟೆಗೆ ಸತ್ಸಂಗವನ್ನು 60 ಜನ ಅಭ್ಯಾಸಿಗಳೊಂದಿಗೆ ನಡೆಸಿಕೊಡಲಾಯಿತು. ಅಭ್ಯಾಸಿಗಳು ಆಶ್ರಮ ಭೂಮಿಯನ್ನು ಸರಿ ಮಾಡುವುದು, ಗಿಡ ನೆಡುವುದು ಮತ್ತು ಇನ್ನಿತರ ಭೂಸುಧಾರಣಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ಅತೀವ ಆನಂದವನ್ನು ಪಡೆದುಕೊಂಡರು.

## ಕರ್ನಾಟಕ ದಕ್ಷಿಣ ವಲಯ

ವಲಯಾಧಿಕಾರಿ ಸೋದರ ಶರತ್ ಹೆಗ್ಡೆಯವರನ್ನು ಒಳಗೊಂಡ ಮೂರು ಪ್ರಶಿಕ್ಷಕರ ತಂಡವೊಂದು ದಕ್ಷಿಣ ಕರ್ನಾಟಕದ ಮಲೆನಾಡಿನ ಅಭಿವೃದ್ಧಿಶೀಲ ಕೇಂದ್ರಗಳ ಅಭ್ಯಾಸಿಗಳನ್ನು ಭೇಟಿ ಮಾಡಲು ಪ್ರವಾಸ ಕೈಗೊಂಡಿದ್ದರು. ಕರ್ನಾಟಕದ ಹೊಸವರ್ಷವಾದ ಉಗಾದಿ 27 ನೇ ಮಾರ್ಚ್‌ರಂದು ಅವರು ಹೊರಟು ತುಮಕೂರು ಮತ್ತು ತಿಪಟೂರಿನ ಆಶ್ರಮದಲ್ಲಿ ವಿರಮಿಸಿದರು. ತಂಡವು ಕಡೂರು ತಲುಪಿದಾಗ ಅಲ್ಲಿ ಒಂದು ಅಭ್ಯಾಸಿ ಕುಟುಂಬವು ಪ್ರಶಿಕ್ಷಕರ ಕೊರತೆಯನ್ನೂ ಲಕ್ಷಿಸದೆ ಕೇವಲ ಗುರುಗಳ ಮೇಲೆ ಅವಲಂಬಿತರಾಗಿ ಅನೇಕವರ್ಷಗಳಿಂದ ಸಾಧನಾಪ್ರವೃತ್ತರಾದದ್ದನ್ನು ಕಂಡು ಆಶ್ಚರ್ಯಚಕಿತರಾದರು. ಈ ಕುಟುಂಬವು ಸತ್ಸಂಗಕ್ಕಾಗಿ 40ರಿಂದ 70 ಕಿ.ಮೀ ದೂರ ಹೋಗುತ್ತದೆ ಹಾಗೂ ಅಗಾಗ್ಗೆ ಮಾತ್ರ ಬೈಠಕ್‌ಗಳನ್ನು ತೆಗೆದುಕೊಳ್ಳುತ್ತಾರೆ. ಅಭ್ಯಾಸಿಯ ವೃದ್ಧತಂದೆಯ ಜೀವನದ ಕಡೆ ಧನಾತ್ಮಕ ವಿಚಾರ ಮತ್ತು ದೃಷ್ಟಿ ಕಳೆದುಕೊಂಡಿದ್ದರೂ ಒಂದು ಸಣ್ಣ ಅಂಗಡಿಯನ್ನು ತಾವೇ ನಡೆಸುವುದನ್ನು ನೋಡಲು ಅದ್ಭುತವೆನಿಸುತ್ತದೆ.

ಶಿವಮೊಗ್ಗದಲ್ಲಿ ರಾತ್ರಿ ಉಳಿದುಕೊಂಡು ತಂಡವು ಮಲೆನಾಡ ಕಾಡು ದಟ್ಟವಾಗುವ ಹೊಸನಗರಕ್ಕೆ ಹೊರಟರು. ಸೋದರ ಅನಂತರಾಮ್‌ರವರ ಕುಟುಂಬದವರು ಬೈಠಕುಗಳನ್ನು ತೆಗೆದುಕೊಂಡರು. ಸಮೀಪದ ಚಿಕ್ಕ ಹಳ್ಳಿಯಾದ ಹುಮ್ಚಾದ ಸೋದರಿಯೊಬ್ಬರು ತಮ್ಮಲ್ಲಿ ಭೇಟಿ ನೀಡುವಂತೆ ವಿನಂತಿಸಿಕೊಂಡರು. ಅವರು ಪ್ರಶಿಕ್ಷಕರನ್ನು ಕಂಡು ಸಂತೋಷ ಪಟ್ಟಿದುದಲ್ಲದೆ ಮೂರು ತಿಂಗಳ ಸಾಧನೆಯಿಂದ ತಮ್ಮಲ್ಲಾದ ಬದಲಾವಣೆಗಳನ್ನು ವ್ಯಕ್ತ ಪಡಿಸಿದರು. ಅವರು ಗುರುಗಳನ್ನು ಕಾಣುವ ಇಚ್ಛೆಯನ್ನು ಪ್ರಕಟಿಸಿದರು. ತಂಡವು ನಂತರ ತೀರ್ಥಹಳ್ಳಿ ಮತ್ತು ಕೊಪ್ಪ ಪಟ್ಟಣಗಳಿಗೆ ಪ್ರಯಾಣಿಸಿ ಕೊನೆಗೆ ಸಂಜೆಯ ಹೊತ್ತಿಗೆ ಚಿಕ್ಕಮಗಳೂರಿಗೆ ತಲುಪಿದರು.

ಕೊನೆಯ ದಿನವು ಚಿಕ್ಕಮಗಳೂರಿನಲ್ಲಿ ಸತ್ಸಂಗದೊಂದಿಗೆ ಪ್ರಾರಂಭವಾಯಿತು. ಅಭ್ಯಾಸಿಗಳ ಒಂದು ಸಣ್ಣ ಗುಂಪನ್ನು ಭೇಟಿಯಾಗಲು ಹಾಸನದಲ್ಲಿ ನಿಂತ ನಂತರ ತಂಡವು ಬೆಂಗಳೂರು ತಲುಪಿತು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

# ವಲಯ ಸುತ್ತುವರಿ

ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

ಕಳೆದ ಎರಡು ತಿಂಗಳುಗಳಿಂದ ದೇಶದಾದ್ಯಂತ ವಿವಿಧ ಕೇಂದ್ರಗಳಲ್ಲಿ ಅನೇಕ ತರಬೇತಿ ಕಾರ್ಯಕ್ರಮಗಳು ಮತ್ತು ಚರ್ಚೆಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಗಳು ಪ್ರತಿ ಕೇಂದ್ರದ ಅಗತ್ಯಗಳಿಗೆ ತಕ್ಕಂತೆ ನಿಶ್ಚಿತವಾಗಿದ್ದು ಅಭ್ಯಾಸಿಗಳು ತಮ್ಮನ್ನು ತಾವು ತರಬೇತುಗೊಳಿಸಿಕೊಳ್ಳುವುದರೊಂದಿಗೆ ಪದ್ಧತಿಯ ನವೀನ ಅರ್ಥಗಳಿಗೆ ತಮ್ಮನ್ನು ತೆರೆದುಕೊಳ್ಳಲು ಅವಕಾಶ ಮಾಡಿಕೊಟ್ಟವು.

**ರಾಣಿಖೇತ್** ಕೇಂದ್ರದಲ್ಲಿ ಯುವಜನಕ್ಕೆ 9ನೇ ಫೆಬ್ರುವರಿಯಂದು 'ಗುರುಗಳೊಂದಿಗಿನ ಸಂಬಂಧ' ಎಂಬ ವಿಷಯದ ಮೇಲೆ ಕೇಂದ್ರಿತವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಾಗಿಗಳು ತಮ್ಮನ್ನು ಪರಿಚಯಿಸಿಕೊಂಡರು ಮತ್ತು ಗುರುಗಳೊಂದಿಗೆ ಅವರನ್ನು ಸೇರಿಸುವುದು ಏನು ಎಂಬುದನ್ನು ವಿವರಿಸಿದರು. ಅವರು ಆಡಿದ ಒಂದು ಆಟದಲ್ಲಿ ಸಾಧನೆ ಮತ್ತು ಸಹಜಮಾರ್ಗದ ಇನ್ನಿತರ ಅಂಶಗಳ ಬಗ್ಗೆ 20 ಪ್ರಶ್ನೆಗಳನ್ನು ಕೇಳಲಾಯಿತು. ಈ ಕಾರ್ಯಕ್ರಮದಿಂದ ಸಹಜಮಾರ್ಗವನ್ನು ಚೆನ್ನಾಗಿ ಅರಿತುಕೊಳ್ಳಲು ಸಹಾಯವಾಯಿತು.



ಉತ್ತರಾಖಂಡ್‌ನ **ಪಿತೋರ್‌ಗಢ್** ಕೇಂದ್ರದಲ್ಲಿ 10–11 ಮಾರ್ಚ್‌ರಂದು ಹೊಸ ಅಭ್ಯಾಸಿಗಳಿಗಾಗಿ ಎರಡು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬಹು ಸಂಖ್ಯೆಯಲ್ಲಿ ಅಭ್ಯಾಸಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವು ಸಹಜಮಾರ್ಗ ಪರಿಚಯ, ಪ್ರಾರ್ಥನೆ, ಧ್ಯಾನ ಮತ್ತು ಶುದ್ಧೀಕರಣ ಕ್ರಿಯೆಯಿಂದ ಶುರುವಾಯಿತು. ಅದರ ನಂತರ ನಡತೆಯ ರಚನೆ, ಸಮಾಜದಲ್ಲಿ ಅಭ್ಯಾಸಿಗಳ ಪಾತ್ರ ಮತ್ತು ಸಾರ್ವಜನಿಕರಲ್ಲಿ ಸಹಜಮಾರ್ಗದ ಅರಿವು ಮುಂತಾದ ವಿಷಯಗಳನ್ನೊಳಗೊಂಡ ಕಾರ್ಯಾಗಾರವನ್ನು ನಡೆಸಿಕೊಡಲಾಯಿತು. ಎರಡನೇ ದಿನದಂದು ಗುರುಗಳ ಪಾತ್ರ, ಭ್ರಾತೃತ್ವ ಮತ್ತು ಸತತ ಸ್ಮರಣೆಯಂತಹ ವಿಷಯಗಳು ಚರ್ಚಿಸಲ್ಪಟ್ಟವು. ಅಭ್ಯಾಸಿಗಳು ತಾವೇ ಸ್ವತಃ ತರಬೇತಿ ಕಾರ್ಯಕ್ರಮದ ಸಾಧನೆಗಳ ಮಾಪನ ಮಾಡಿದರು. ಅವರೆಲ್ಲ 9 ಘಂಟೆಯ ವಿಶ್ವಪ್ರಾರ್ಥನೆಯಲ್ಲಿ ತಪ್ಪದೇ ಪಾಲ್ಗೊಳ್ಳುವುದಾಗಿ ನಿರ್ಧರಿಸಿದರು.

**ಕಾಶೀಪುರ** ಕೇಂದ್ರದಲ್ಲಿ ಹೊಸ ಅಭ್ಯಾಸಿಗಳಿಗಾಗಿ 15 ಫೆಬ್ರುವರಿಯಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇತ್ತೀಚೆಗೆ ಸೇರಿದ ಅಭ್ಯಾಸಿಗಳ ಸಲುವಾಗಿ ಸಹಜಮಾರ್ಗ ಸಾಧನೆಯನ್ನು ಸ್ಪಷ್ಟವಾಗಿ ಮನಸ್ಸಿಗೆ ನಾಟುವಂತೆ ಈ ಕಾರ್ಯಕ್ರಮದಲ್ಲಿ ಹೇಳಲಾಯಿತು ಮತ್ತು ಅರವತ್ತಕ್ಕಿಂತ ಹೆಚ್ಚು ಅಭ್ಯಾಸಿಗಳು ಪಾಲ್ಗೊಂಡರು. ಕಾರ್ಯಕ್ರಮದಲ್ಲಿ ಸಹಜಮಾರ್ಗದ ಮೂಲತತ್ವಗಳಾದ ಪ್ರಾರ್ಥನೆ, ಧ್ಯಾನ ಮತ್ತು ಶುದ್ಧೀಕರಣದ ಮೇಲೆ ಉಪನ್ಯಾಸಗಳನ್ನು ನೀಡಲಾಯಿತು. ನಂತರ ಪ್ರಶ್ನೋತ್ತರ ಕಾರ್ಯಕ್ರಮವಾಯಿತು. ಮತ್ತೊಂದು ಕಡೆ ಸತತ ಸ್ಮರಣೆಯ ಮೇಲೆ ನಡೆದ ಕಾರ್ಯಕ್ರಮದಲ್ಲಿ ಐವತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು. ಸತತ ಸ್ಮರಣೆಯ ಅಭ್ಯಾಸದ ಮೇಲೆ ನೀಡಿದ ಉಪನ್ಯಾಸಗಳಿಂದ ಅಭ್ಯಾಸಿಗಳಿಗೆ ಯೋಚನೆ ಮತ್ತು ಸತತ ಸ್ಮರಣೆಯ ನಡುವಿನ ಭಿನ್ನತೆಯನ್ನು ತಿಳಿದುಕೊಳ್ಳಲು ಸಹಾಯವಾಯಿತು. ಪ್ರಶ್ನೋತ್ತರ ಕಾರ್ಯಕ್ರಮದಿಂದ ಅಭ್ಯಾಸಿಗಳು ಮನ ಬಿಚ್ಚಿ ಮಾತನಾಡಲು ಸಾಧ್ಯವಾಯಿತು.





ಗ್ವಾಲಿಯರ್‌ನಿಂದ 70 ಕಿ.ಮೀ. ದೂರದ **ದಾಟಿಯಾ** ಕೇಂದ್ರದಲ್ಲಿ 29 ಮಾರ್ಚ್‌ರಂದು ಕಾರ್ಯಾಗಾರವೊಂದನ್ನು ಆಯೋಜಿಸಲಾಗಿದ್ದು ಹತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು. ಕಾರ್ಯಾಗಾರದ ವಿಷಯವು "ಕೇಂದ್ರದ ಬೆಳವಣಿಗೆಗೆ ನನ್ನ ಕೊಡುಗೆ ಏನು?" ಎಂಬುದಾಗಿತ್ತು. ಇದರ ಪರಿಣಾಮವಾಗಿ ಸತತ ಸ್ಮರಣೆಯೊಂದಿಗೆ ಸ್ವಯಂಸೇವೆಯನ್ನು ಮಾಡಿದರೆ ಬೇರೆಯವರಿಗೆ ಪ್ರೇರಣೆಯಾಗಬಹುದು ಮತ್ತು ಮಿಶನ್ನಿನ ಬೆಳವಣಿಗೆಯಲ್ಲಿ ಪಾಲುದಾರರಾಗಬಹುದು ಎಂದು ತೀರ್ಮಾನವಾಯಿತು. ದೇಣಿಗೆ ನೀಡುವ ಮೂಲಕವೂ ಗುರುಗಳ ಮೇಲಿನ ಕೃತಜ್ಞತೆಯನ್ನು ವ್ಯಕ್ತಪಡಿಸಬಹುದು.



ಗ್ವಾಲಿಯರ್‌ನ ಬಳಿ ಇರುವ ಮತ್ತೊಂದು ಕೇಂದ್ರವಾದ **ಶಿವಪುರಿ**ಯಲ್ಲಿ ಭಾನುವಾರದ ಸತ್ಸಂಗದಲ್ಲಿ ನಿಯಮಿತವಾಗಿ ಪಾಲ್ಗೊಳ್ಳಲಾರದ 23 ಅಭ್ಯಾಸಿಗಳ ಸಲುವಾಗಿ 22 ಮಾರ್ಚ್‌ರಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾಧನೆಯ ಬಗೆಗಿನ ತಪ್ಪು ತಿಳುವಳಿಕೆಯಿಂದ ಅಭ್ಯಾಸಿಗಳಲ್ಲಿ ಶಿಸ್ತಿನ ಕೊರತೆಯು ಉಂಟಾಗುವುದೆಂದು ತಿಳಿಯಲಾಯಿತು. ಪ್ರಶಿಕ್ಷಕರು ಭಾಗಿಗಳೊಂದಿಗೆ ಸಮಾಲೋಚನೆ ನಡೆಸಿ ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಗುರುಗಳ ಕೃಪೆಯಿಂದ ಹತ್ತು ಅಭ್ಯಾಸಿಗಳು ಸಾಧನೆಯನ್ನು ಮತ್ತೆ ಪ್ರಾರಂಭಿಸಿದರು.
ಹೊಸ ಅಭ್ಯಾಸಿಗಳಿಗೆ 6 ತಿಂಗಳು ಅಥವಾ ಹೆಚ್ಚಿನ ಸಮಯದಲ್ಲಿ ವಿಶೇಷ ಗಮನ ನೀಡಿದರೆ ಅವರು ಪದ್ಧತಿಯ ಬಗ್ಗೆ ಸ್ಪಷ್ಟತೆಯನ್ನು ಹೊಂದಿ ಸಾಧನೆಯನ್ನು ನಿಯಮಿತವಾಗಿ ಮಾಡಲು ಸಹಾಯವಾಗುವುದೆಂದು ಅಭಿಪ್ರಾಯ ಪಡಲಾಯಿತು.

**ಇಂದೋರ್**‌ನಲ್ಲಿ ಗುರುಗಳ ಭೇಟಿಯ ನಂತರ ಹೊಸ ಅಭ್ಯಾಸಿಗಳಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾಧನೆ ಮತ್ತು ಸಹಜಮಾರ್ಗದ ತತ್ವಗಳ ಬಗ್ಗೆ ವಿವಿಧ ಅಂಶಗಳನ್ನು ವಿಶದವಾಗಿ ತಿಳಿಸಲಾಯಿತು. ಹೊಸ ಮತ್ತು ಹಳೆಯ ಅಭ್ಯಾಸಿಗಳ ನಡುವೆ ಬಹಳಷ್ಟು ಚರ್ಚೆಯಾಯಿತು.

**ಜೈಪುರದಲ್ಲಿ** 15 ಮಾರ್ಚ್‌ರಂದು ಹೊಸ ಅಭ್ಯಾಸಿಗಳಿಗಾಗಿ ಮಾರ್ವಾಡಿ ಭಾಷೆಯಲ್ಲಿ ಅರ್ಧ ದಿನದ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಅಭ್ಯಾಸಿಗಳ ಪರಿಚಯದಿಂದ ಕಾರ್ಯಕ್ರಮವು ಪ್ರಾರಂಭವಾಯಿತು. ಧ್ಯಾನ, ಶುದ್ಧೀಕರಣ ಮತ್ತು ಪ್ರಾರ್ಥನೆಯಂತಹ ಮೂಲವಿಷಯಗಳನ್ನು ಪ್ರಸ್ತುತ ಪಡಿಸಿ ಪ್ರತಿ ಉಪನ್ಯಾಸದ ನಂತರ ಪ್ರಶ್ನೋತ್ತರವನ್ನು ನಡೆಸಲಾಯಿತು. ಸ್ಥಳೀಯ ಭಾಷೆಯಲ್ಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸಿದ್ದು ಇದೇ ಮೊದಲನೇ ಸಲವಾದ್ದರಿಂದ ಸಮೀಪದ ಹಳ್ಳಿಗಳಿಂದ ಬಂದ ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮದೇ ಭಾಷೆಯಲ್ಲಿ ನಡೆಸಿಕೊಟ್ಟದ್ದರಿಂದ ಪದ್ಧತಿಯ ಮೂಲ ಉದ್ದೇಶವನ್ನು ಅರ್ಥೈಸಿಕೊಳ್ಳಲು ಸಹಾಯವಾಯಿತೆಂದು ಹರ್ಷಿಸಿದರು. ಸುಮಾರು 30 ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದು ಇಂತಹ ಕಾರ್ಯಕ್ರಮಗಳನ್ನು ಪ್ರತಿ 2–3 ತಿಂಗಳಿಗೊಮ್ಮೆ ನಡೆಸಿಕೊಡಬೇಕೆಂದು ಅಭಿಪ್ರಾಯ ಪಟ್ಟರು.

ಆಂಧ್ರದ ಕಾಕಿನಾಡದ ಉಪನಗರ– ದೇವಾಲಯಗಳ ನಗರ– **ದ್ರಾಕ್ಷಾರಾಮಮ್‌ನಲ್ಲಿ** ಈಗ 35 ಅಭ್ಯಾಸಿಗಳಿದ್ದಾರೆ. ಸಹಜಮಾರ್ಗ ಸಿದ್ಧಾಂತಗಳ ಬಗ್ಗೆ ಸರಿಯಾದ ತಿಳುವಳಿಕೆ ಮತ್ತು ಸಾಧನೆಯನ್ನು ನಿಯಮಿತಗೊಳಿಸಲು ಸಿದ್ಧಾಂತಗಳು ಹಾಗೂ ಸಾಧನೆಯ ಮೇಲೆ ತರಬೇತಿ ಕಾರ್ಯಕ್ರಮವನ್ನು ಮಾರ್ಚ್ 5ರಂದು ನಡೆಸಲಾಯಿತು. ಕೇಂದ್ರದ ಆಯೋಜಕರಾದ ಸೋದರ ಕೆ. ಶಿವರಾಮ್‌ರವರ ಮನೆಯಲ್ಲಿ ಕಾಕಿನಾಡ ಕೇಂದ್ರದ ಮುಖ್ಯಸ್ಥರು ನಡೆಸಿಕೊಟ್ಟರು. ಈ ಕೇಂದ್ರದಲ್ಲಿ ಇಂತಹ ಕಾರ್ಯಕ್ರಮವು ನಡೆದಿರುವುದು ಇದೇ ಪ್ರಥಮ ಬಾರಿ. ಇದರಿಂದ ದೇವಾಲಯಗಳ ನಗರಿಯ ಬಾಗಿಲುಗಳು ಸಹಜಮಾರ್ಗಕ್ಕೆ ತೆರೆಯಬಹುದೆಂಬುದು ಒಂದು ಆಶಯ.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

**ಕಾಶೀಪುರ** ಕೇಂದ್ರವು 9ನೇ ಏಪ್ರಿಲ್‌ರಂದು ಆಯೋಜಿಸಿದ್ದ ಮುಕ್ತ ಸಭೆಯಲ್ಲಿ ಸುಮಾರು ಮೂವತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದು ಕಾರ್ಯಕ್ರಮದಲ್ಲಿ ಅಸ್ತಿತ್ವಕ್ಕೆ ನಿಜವಾದ ಗುರಿಯ ಅಗತ್ಯ, ಮನಸ್ಸನ್ನು ಮಿತಿಗೊಳಿಸುವ ಅವಶ್ಯಕತೆ, ಸಮತೋಲಿತ ಅಸ್ತಿತ್ವದ ಮಹತ್ವ ಇತ್ಯಾದಿ ವಿಷಯಗಳ ಮೇಲೆ ಉಪನ್ಯಾಸಗಳನ್ನು ನೀಡಲಾಯಿತು. ನಂತರ ಅಸಾಂಪ್ರದಾಯಿಕ ಪ್ರಶ್ನೋತ್ತರವನ್ನು ನಡೆಸಿಕೊಡಲಾಯಿತು. ಪ್ರೇಕ್ಷಕರು ಸಮಂಜಸ ಪ್ರಶ್ನೆಗಳನ್ನು ಕೇಳಲು ಆಯೋಜಕರು ಉತ್ಸಾಹದಿಂದ ಉತ್ತರಿಸಿದ್ದರಿಂದ ಈ ಮುಕ್ತ ಸಭೆಯು ಪರಿಣಾಮಕಾರಿಯಾಯಿತೆಂದು ಅಭಿಪ್ರಾಯ ಪಡಲಾಯಿತು.

“ಸಹಜ ಮಾರ್ಗ ಧ್ಯಾನ” ಎಂಬ ವಿಷಯ ಮೇಲೆ ಒಂದು ಮುಕ್ತ ಸಭೆಯನ್ನು **ಬೆಂಗಳೂರಿನ** ಪರಂಧಾಮದಲ್ಲಿ 21ನೇ ಮಾರ್ಚ್‌ರಂದು ನಡೆಸಲಾಯಿತು. ನವೆಂಬರ್‌ನಲ್ಲಿ ಈ ಆಶ್ರಮದ ಉದ್ಘಾಟನೆಯಾದಾಗಿನಿಂದ ಇದು ಮೊದಲನೇ ಸಾರ್ವಜನಿಕ ಕಾರ್ಯಕ್ರಮ. ಎಂಬತ್ತು ಅತಿಥಿಗಳು ಪಾಲ್ಗೊಳ್ಳುವುದರ ಮೂಲಕ ಒಂದು ವಾರ ಮುಂಚಿತವಾಗಿ ಕಳಿಸಿದ ಆಹ್ವಾನಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿತು. ಕಾರ್ಯಕ್ರಮವು ಸೋದರ ಸುಬ್ರಮಣಿಯನ್ ಶಂಕರನ್‌ರವರು ಪರಿಚಯ ಮಾಡಿಕೊಟ್ಟ ಧ್ಯಾನದ ಅಗತ್ಯ ಎಂಬ ವಿಷಯದಿಂದ ಪ್ರಾರಂಭವಾಗಿತು. ನಂತರ ಭಾಗಿಗಳಿಗೆ ತಮ್ಮ ಕಣ್ಣಳನ್ನು ಮುಚ್ಚಿಕೊಂಡು ಹತ್ತು ನಿಮಿಷಗಳ ಕಾಲ ಸುಮ್ಮನೇ ಕುಳಿತುಕೊಳ್ಳುವಂತೆ ಸೂಚಿಸಲಾಯಿತು. ತದನಂತರ 'ಅಮೇರಿಕಾದ ದೈನಂದಿನ ಜೀವನದಲ್ಲಿ ಧ್ಯಾನ ಮತ್ತು ಆಧ್ಯಾತ್ಮ' ಎಂಬ ವಿಷಯದ ಮೇಲೆ ಗುರುಗಳು ಮಾಡಿದ ಉಪನ್ಯಾಸದ ಡಿವಿಡಿಯನ್ನು ತೋರಿಸಲಾಯಿತು. ಅದರ ಹಿಂದೆಯೇ ಸೋದರ ಸುಬ್ರಮಣಿಯನ್‌ರವರು 'ಸಹಜಮಾರ್ಗದ ಧ್ಯಾನ' ವಿಷಯವನ್ನು ವಿಸ್ತೃತವಾಗಿ ಅನೇಕ ಪ್ರಶ್ನೆಗಳನ್ನು ಸ್ಪಷ್ಟ ಮಾಡುತ್ತಾ ವಿವರಿಸಿದರು. ಅವರ ಪ್ರಶ್ನೆಗಳನ್ನು ಸ್ಪಷ್ಟಗೊಳಿಸುವುದರಲ್ಲಿ ಸಹಾಯವಾಗುವಂತೆ ಅಭ್ಯಾಸಿಗಳೊಂದಿಗೆ ಭಾಗಿಗಳನ್ನು ಸಣ್ಣ ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಅನೇಕ ಜನರು ಧ್ಯಾನವನ್ನು ಪ್ರಾರಂಭಿಸಲು ಉತ್ಸುಕರಾಗಿದ್ದರು.



9ನೇ ಮಾರ್ಚರಂದು **ಗುಲಬರ್ಗಾದ** ಪೂಜ್ಯ ದೊಡ್ಡಪ್ಪ ಅಪ್ಪ ತಾಂತ್ರಿಕ ವಿದ್ಯಾಲಯದಲ್ಲಿ ಮುಕ್ತಸಭೆಯನ್ನು ಆಯೋಜಿಸಲಾಗಿತ್ತು. ಸುಮಾರು ನೂರು ಜನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು. ಆ ದಿನದ ವಿಷಯವು 'ಮನಸ್ಸಿನ ನಿಯಂತ್ರಣದಿಂದ ಸ್ವಪರಿಪೂರ್ಣತೆ' ಎಂಬುದಾಗಿತ್ತು. ಡಾ. ಗಜೇಂದ್ರ ಸಿಂಗ್‌ರವರು ಈ ವಿಷಯದ ಮೇಲೆ ಮಾತನಾಡಿದರು ಹಾಗೂ ಪವರ್‌ಪಾಯಿಂಟ್ ಪ್ರಸ್ತುತಿಯನ್ನೂ ನೀಡಿದರು. ಈ ಅವಧಿಯಲ್ಲಿ ಸಂಪೂರ್ಣ ನಿಶ್ಶಬ್ದತೆಯಿದ್ದು ವಾತಾವರಣದಲ್ಲಿ ತೀವ್ರ ಪ್ರಾಣಾಹುತಿಯನ್ನು ಗಮನಿಸಲಾಯಿತು. ಉಪನ್ಯಾಸದ ನಂತರ ಸಂಕ್ಷಿಪ್ತ ಪ್ರಶ್ನೋತ್ತರವನ್ನು ನಡೆಸಲಾಯಿತು. ಐವರು ವಿದ್ಯಾರ್ಥಿಗಳು ಅತ್ಯುತ್ಸಾಹವನ್ನು ತೋರಿರುವರು.

**ಹುಬ್ಬಳ್ಳಿ** ಕೇಂದ್ರವು 12ನೇ ಮಾರ್ಚ್‌ರಂದು ಎಸ್‌ಬಿಎಮ್ ಅಧಿಕಾರಿಗಳ ಸಂಘದಲ್ಲಿ ಮುಕ್ತ ಸಭೆಯನ್ನು ಆಯೋಜಿಸಿದ್ದರು. ಇದರಿಂದ ಧ್ಯಾನದಿಂದಾಗುವ ಲಾಭಗಳ ಬಗ್ಗೆ ತಿಳುವಳಿಕೆಯನ್ನು ಹಬ್ಬಿಸಲು ಸದವಕಾಶ ನೀದಿದಂತಾಯಿತು. ಸೋದರ ಜಿ. ಎಸ್. ಕಾಮತ್ ಮತ್ತು ಸೋದರಿ ಗೀತಾ ಕಾಮತ್‌ರವರು ಮಿಶನ್ನಿನ ಬಗ್ಗೆ ಮಾತನಾಡಿದರು ಹಾಗೂ ಧ್ಯಾನದಿಂದ ಒತ್ತಡವನ್ನು ಜಯಿಸುವಂತಹ ವಿಷಯಗಳ ಬಗ್ಗೆ ಮಾತನಾಡಿದರು. ಪರಿಚಯ ಪುಸ್ತಕಗಳನ್ನು ಕೊಳ್ಳುವ ಬಗ್ಗಿ ಭಾಗಿಗಳಲ್ಲಿ ಆಸಕ್ತಿಯುತ

## ಮುಂಬೈ

ಮುಂಬೈನ ಕೇಂದ್ರ ರೇಲ್ವೆ ತಾಂತ್ರಿಕ ತರಬೇತಿ ವಿದ್ಯಾಲಯದಲ್ಲಿ 7 ನೇ ಮಾರ್ಚ್‌ರಂದು ತರಬೇತಿಯಲ್ಲಿರುವ ವಿದ್ಯಾರ್ಥಿಗಳಿಗೆ ಸಹಜಮಾರ್ಗದ ಪರಿಚಯ ಮಾಡಿಕೊಡಲು ಕಮ್ಮಟವೊಂದನ್ನು ಏರ್ಪಡಿಸಲಾಗಿತ್ತು. ಎಂಬತ್ತು ತರಬೇತುದಾರರು ಮತ್ತು ವಿದ್ಯಾಲಯದ ಇತರೆ ಅಧಿಕಾರಿಗಳು ಕಾರ್ಯಕ್ರಮಕ್ಕೆ ಹಾಜರಾದರು. ಸೋದರ ತುಷಾರ್ ಪ್ರಧಾನ್‌ರವರು ನಮ್ಮ ದೈನಂದಿನ ಜೀವನದಲ್ಲಿ ಅಧ್ಯಾತ್ಮ ಮತ್ತು ಧ್ಯಾನದ ಮಹತ್ವವನ್ನು ವಿವರಿಸಿದರು.

ಸೋದರ ವಿಶ್ವಾಸ್ ಟಿಲ್ಲುರವರು ಸಹಜಮಾರ್ಗ ಸಾಧನೆ, ಅದರ ವಿವಿಧ ಅಂಶಗಳು ಮತ್ತು ಪ್ರತಿ ವ್ಯಕ್ತಿಯ ಪರಿವರ್ತನೆಗೆ ಪ್ರಾಣಾಹುತಿಯು ಹೇಗೆ ಸಹಾಯ ಮಾಡುತ್ತದೆ ಎಂಬುದರ ಬಗ್ಗೆ ಮಾತನಾಡಿದರು. ಸೋದರ ಶ್ರೀಧರ್ ತೋಡಾರವರು ಗುರುಗಳು ಹೊಸ ಅಭ್ಯಾಸಿಗಳಿಗೆ ಸಹಜ ಮಾರ್ಗದ ಕುರಿತು ಹೇಳುತ್ತಿರುವ ವಿಡಿಯೋ ತುಣುಕನ್ನು ತೋರಿಸಿದರು. ನಂತರ ಪ್ರಶ್ನೋತ್ತರ ಕಾರ್ಯಕ್ರಮವಿತ್ತು.

ಪ್ರೇಕ್ಷಕರು ದೇಶದ ವಿವಿಧ ಭಾಗಗಳಿಂದ ಬಂದವರಾಗಿದ್ದರಿಂದ ಅವರು ಸೇರಬಯಸಿದಲ್ಲಿ ಅವರ ಸ್ಥಳೀಯ ಪ್ರಶಿಕ್ಷಕರ ವಿವರಗಳನ್ನು ನೀಡಲಾಯಿತು. ವಿದ್ಯಾಲಯದ ಮೇಲಧಿಕಾರಿಗಳು ಪ್ರತಿ ತಿಂಗಳೂ ಬರುವ ವಿದ್ಯಾರ್ಥಿಗಳ ತಂಡಕ್ಕಾಗಿ ಅಗಾಗ್ಗೆ ಇಂತಹ ಕಾರ್ಯಾಗಾರಗಳನ್ನು ನಡೆಸಿಕೊಡಲು ವಿನಂತಿಸಿದರು.

## ರೂರ್ಕಿ

ರೂರ್ಕಿ ಆಶ್ರಮದಲ್ಲಿ 29 ಮಾರ್ಚ್‌ರಂದು ಮುಕ್ತ ಸಭೆಯೊಂದನ್ನು ನಡೆಸಲಾಯಿತು. ನಗರದ ಪ್ರಮುಖ ಸ್ಥಳಗಳಲ್ಲಿ ಆಶ್ರಮದ ಬ್ಯಾನರ್ ಹಾಕಿದುದಲ್ಲದೆ ಅಭ್ಯಾಸಿಗಳು ಪ್ರತ್ಯೇಕ ಆಹ್ವಾನ ಪತ್ರಿಕೆಗಳನ್ನು ತಮ್ಮ ಸ್ನೇಹಿತರು ಮತ್ತು ಕುಟುಂಬದವರಿಗೆ ಹಂಚಿದರು. ಸುಮಾರು 150 ಜನರು ಹಾಜರಿದ್ದರು. ಸೋದರ ಗ್ಯಾನೇಶ್ವರ್ ಸರೀನ್ ಮತ್ತು ಸೋದರಿ ಛವಿರವರು ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರೇಕ್ಷಕರೆಲ್ಲರೂ ಮಗ್ನರಾಗಿದ್ದು ಸಾಧನೆಯನ್ನು ಪ್ರಾರಂಭಿಸಲು ಉತ್ಸುಕರಾಗಿದ್ದನ್ನು ಗಮನಿಸಿ ಸಂತೋಷವಾಯಿತು. ಸುಮಾರು 13 ಜನ ಸಾಧನೆಯನ್ನು ಪ್ರಾರಂಭಿಸಿದರು. ಕೆಲ ಸ್ಥಳೀಯ ದಿನಪತ್ರಿಕೆಗಳು ಭಾರೀ ಮಳೆಯಲ್ಲೂ ನಡೆದ ಈ ಸಭೆಯ ಬಗ್ಗೆ ಮುದ್ರಿಸಿದವು.

## ಸೋನ್‌ವಾಡಿ, ಮಹಾರಾಷ್ಟ್ರ

24 ಫೆಬ್ರುವರಿಯಂದು ಸೋನ್‌ವಾಡ(ಔರಂಗಾಬಾದ್)ನಲ್ಲಿ ಹೊಸ ಅಭ್ಯಾಸಿಗಳಿಗಾಗಿ ತರಬೇತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸೋನ್‌ವಾಡಿ ಮತ್ತು ಲಸೂರ್‌ನ ಸುಮಾರು 40 ಅಭ್ಯಾಸಿಗಳು ಭಾಗವಹಿಸಿದರು. ಸೋದರ ಡಾ. ಗಿರ್ಗೆರವರು 'ಸಹಜ ಮಾರ್ಗದ ಮೂಲತತ್ವಗಳು' ಹಾಗೂ 'ಪ್ರಾರ್ಥನೆ ಮತ್ತು ಧ್ಯಾನ'ಗಳನ್ನು ವಿವರಿಸಿದರು. ತದನಂತರ ಸೋದರ ಚೌಹಾನ್ ಮತ್ತು ಸೋದರ ಚಿಟೆರವರು ಸಹೋದರತ್ವ ಮತ್ತು ರಾಜಯೋಗದ ಬಗ್ಗೆ ಅನುಕ್ರಮವಾಗಿ ಮಾತನಾಡಿದರು. ಭೋಜನದ ನಂತರ ಸೋನ್‌ವಾಡಿಯ ಸ್ಥಳೀಯ ನಿವಾಸಿಗಳಿಗಾಗಿ ಮುಕ್ತಸಭೆಯನ್ನು ನಡೆಸಲಾಯಿತು. ಅಲ್ಲಿ ಸಹಜಮಾರ್ಗ ಧ್ಯಾನ ಪದ್ಧತಿಯ ಬಗ್ಗೆ ತಿಳಿಸಲಾಯಿತು. ಕೆಲವು ಅಭ್ಯಾಸಿಗಳು ತಮ್ಮ ಅನುಭವಗಳು ಮತ್ತು ತಮ್ಮಲ್ಲಿ ಕಂಡುಬಂದ ಬದಲಾವಣೆಗಳನ್ನು ಹಂಚಿಕೊಂಡರು. ಎಲ್ಲರ ಅನುಕೂಲಕ್ಕಾಗಿ ಕಾರ್ಯಕ್ರಮವನ್ನು ಹಿಂದಿ ಮತ್ತು ಮರಾಠಿಯಲ್ಲಿ ನಡೆಸಲಾಯಿತು. ಸ್ಥಳೀಯ 'ಸೋನ್‌ವಾಡಿ ಪಾಠಶಾಲೆ'ಯ ಮಕ್ಕಳಿಗಾಗಿ ಮೌಲ್ಯಾಧಾರಿತ ಶಿಕ್ಷಣದ ಮೇಲೆ ಒಂದು ಘಂಟೆಯ ಕಾಲವನ್ನು ಉಪಯೋಗಿಸಲಾಯಿತು. ಕಾರ್ಯಕ್ರಮವು 6 ಘಂಟೆಯ ಸತ್ಸಂಗದ ನಂತರ ಮುಕ್ತಾಯವಾಯಿತು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

## ಆಂಧ್ರಪ್ರದೇಶ– ದಕ್ಷಿಣವಿಭಾಗ.

ದಿ. 19 ನೇ ಫೆಬ್ರುವರಿ ರಂದು, ಜಂಟಿಕಾರ್ಯದರ್ಶಿಗಳಾದ ಬಂಧು ಎ.ಪಿ.ದುರ್ಯೆಅವರು 1–B ವಿಭಾಗದ ಪ್ರಮುಖರಾದ ಬಂಧು ಗಂಗಾಧರ ಅವರೊಂದಿಗೆ ಎಮ್ಮಿಗನೂರು ಮತ್ತು ಕರ್ನೂಲ ನಗರಗಳಿಗೆ ಭೇಟಿ ನೀಡಿದರು. ಎಮ್ಮಿಗನೂರು ನಗರದಲ್ಲಿಯ ಸುಮಾರು 40 ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ನಗರದಲ್ಲಿಯ ಬಂಧು ಗಂಗಾಧರ ಅವರ ಕುಟುಂಬದವರ ಹೊಣೆಗಾರಿಕೆಯಲ್ಲಿರುವ ಒಂದು ಆಂಗ್ಲ ಮಾಧ್ಯಮದ ಹೈಸ್ಕೂಲಿಗೆ ಭೇಟಿಯಿತ್ತರು. ಅಲ್ಲಿ ಉತ್ತಮವಾದ ಗಣವೇಶದಲ್ಲಿರುವ ಸುಮಾರು 900 ವಿದ್ಯಾರ್ಥಿಗಳು ಹಾಗು ಬಾಲಕೀಯರ ಎನ್.ಸಿ.ಸಿ. ಪಡೆಯು ಇತ್ತು. ಬಂಧು ದುರ್ಯೆಅವರು ಅವರ ಸಂಚಲನೆ ಹಾಗು ಸಾಂಘಿಕ ಕವಾಯಿತು ಗಳನ್ನು ವೀಕ್ಷಿಸಿದರು.ಅವರು ಪೂಜ್ಯ ಗುರುಗಳು ವಿಧ್ಯಾರ್ಥಿಗಳಿಗಾಗಿ ನೀಡಿದ ಉಪದೇಶಗಳ ಬಗ್ಗೆ ಮಾತನಾಡಿದರು.ಅದನ್ನು ವಿಧ್ಯಾರ್ಥಿಗಳು ಲಕ್ಷಪೂರ್ವಕವಾಗಿ ಕೇಳಿಕೊಂಡರು. ಶಾಲೆಯ ಎಲ್ಲಾ ವಿಧ್ಯಾರ್ಥಿಗಳಿಗಾಗಿ ಮಿಷನ್ನಿನ ಪ್ರಾರ್ಥನೆಯಿಂದ ಪ್ರಾರಂಭಿಸಿ V.B.S.E. ಚಟುವಟಿಕೆ ಗಳನ್ನು ಆರಂಭಿಸುವುದಾಗಿ ನಿರ್ಧರಿಸಲಾಯಿತು. ನಂತರು ಬಂಧು ದುರ್ಯೆಯವರು ಬಂಧು ಗಂಗಾಧರರವರ ಪೂರ್ವಜರ ವ್ುನ್ಿಂಯ್ಿೂಂದ್ರ್ಲ್ಲಿ ಸ್ಥಾಪಿತವಾಗಿರುವ ಹಾಗು ಸುಮಾರು 120 ಬಡ ಮಕ್ಕಳು ಮುಕ್ತ ಶಿಕ್ಷಣ ಮತ್ತು ಭೋಜನ ಗಳನ್ನು ಪಡೆಯುತ್ತಿರುವ ಇನ್ನೊಂದು ಶಾಲೆಯನ್ನು ಸಂದರ್ಶಿಸಿದರು.





ಕರ್ನೂಲಿನಲ್ಲಿ ಸುಮಾರು 180 ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ಭೋಜನದ ನಂತರ ಏರ್ಪಡಿಸಲಾದ ಪ್ರಶ್ನೋತ್ತರಗಳ ಸತ್ರದಲ್ಲಿ ಅಭ್ಯಾಸಿಗಳು ಕೇಳಿದ ಪ್ರಶ್ನೆಗಳಿಗೆ ವಿವರಣೆಯನ್ನಿತ್ತರು. ಸಾಯಂಕಾಲದ ಸತ್ಸಂಗದಲ್ಲಿ 280 ಅಭ್ಯಾಸಿಗಳು ಉಪಸ್ಥಿತರಿದ್ದರು. ತದನಂತರ ಮತ್ತೊಮ್ಮೆ ನಡೆದ ಪ್ರಶ್ನೋತ್ತರ ಸತ್ರದಲ್ಲಿ ಅಭ್ಯಾಸಿಗಳು ಕೇಳಿದ ಪ್ರಶ್ನೆಗಳಿಗೆ ಪೂಜ್ಯ ಗುರುಗಳು ನೀಡಿದ ಉಪದೇಶಗಳ ಆಧಾರದ ಮೇಲೆ ಉತ್ತರಗಳನ್ನೀಯಲಾಯಿತು. ಪ್ರಶಿಕ್ಷಕರು ಹಾಗು ಗುರುಗಳೊಂದಿಗೆ ಇಟ್ಟುಕೊಳ್ಳಬೇಕಾದ ಸಂಬಂಧ, ಪ್ರಾಪಂಚಿಕ ಜೀವನದಲ್ಲಿ ಬರುವ ಸಮಸ್ಯೆಗಳು ಮತ್ತು ಯಾತನೆಗಳನ್ನು ಹೇಗೆ ಕಾಣಬೇಕು, ಸ್ವಯಂಪ್ರೇರಣೆಯಿಂದ ಮಾಡುವ ಕೆಲಸಗಳು, ಮಕ್ಕಳಿಗಾಗಿ ಕೇಂದ್ರಗಳು, ಮಿಶನ್ನಿನ ಮಹತ್ವದ ಪುಸ್ತಕಗಳು, ಹಾಗು ಪೂರ್ಣದಿನದ ಕಾರ್ಯಕ್ರಮಗಳಲ್ಲಿಯ ಚಟುವಟಿಕೆಗಳ ನಿರೂಪಣೆ ಮುಂತಾದ ವಿಷಯಗಳನ್ನು ಚರ್ಚಿಸಲಾಯಿತು. ಈ ಅರ್ಧ ದಿನದ ಚರ್ಚಾಸತ್ರದಲ್ಲಿ ಅಭ್ಯಾಸಿಗಳು ಅತ್ಯಂತ ಸ್ಫೂರ್ತಿಯುತವಾಗಿ ಪಾಲ್ಗೊಂಡರು.

## ಅಭ್ಯಾಸಿಗಳ ಪ್ರಶಿಕ್ಷಣ – ಮುಂಬಯಿ.

ಮುಂಬಯಿಯಲ್ಲಿ ಅನೇಕ ಕಡೆಗಳಲ್ಲಿ ಹೊಸದಾಗಿ ಸೇರಿಕೊಂಡ ಅಭ್ಯಾಸಿಗಳಿಗಾಗಿ ನಡೆಸಲಾದ ಪ್ರಶಿಕ್ಷಣ ಕಾರ್ಯಕ್ರಮಗಳಿಗೆ ದೊರೆತ ಉಸ್ಫೂರ್ತ ಪ್ರತಿಸಾದದಿಂದಾಗಿ, ಇತರ ಅಭ್ಯಾಸಿಗಳಿಗಾಗಿಯೂ ಮೂಲಭೂತ ಪ್ರಶಿಕ್ಷಣ ಕಾರ್ಯಕ್ರಮದ ಆವಶ್ಯಕತೆ ಇದೆ ಎಂದೆನಿಸಿತು. ನ್ಯೂಪನವೇಲನಲ್ಲಿಯ ಬಾಬೂಜೀ ಮೆಮೋರಿಯಲ್ ಆಶ್ರಮದಲ್ಲಿ ದಿ. 21–22 ಫೆಬ್ರುವರಿಯಂದು ಎರಡು ದಿನಗಳ ಮೂಲಭೂತ ಪ್ರಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಾಲೇಗಾಂವದಿಂದ ಬಂದ ಇಬ್ಬರು ಅಭ್ಯಾಸಿಗಳನ್ನೊಳಗೊಂಡು 40 ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ದಿ.18,19 ರ ಪೂಜ್ಯ ಗುರುಗಳ ಮುಂಬೈ ಭೇಟಿಯಿಂದ ಉತ್ಸಾಹ ಗೊಂಡ ಅಭ್ಯಾಸಿಗಳ ಈ ಪ್ರಶಿಕ್ಷಣ ಕಾರ್ಯಕ್ರಮವು, ಫೆಬ್ರುವರಿ ದಿ. 21 ರಂದು ಆನಂದಪೂರ್ಣವಾತಾವರಣದಲ್ಲಿ, ಸತ್ಸಂಗದೊಂದಿಗೆ ಪ್ರಾರಂಭವಾಯಿತು.

ಮೊದಲನೇಯದಿನದಂದು ಸಾಧನೆಯ ಮೂಲಭೂತ ಪರಿಕಲ್ಪನೆಯ ವಿಷಯಗಳನ್ನೆತ್ತಿಕೊಳ್ಳಲಾಯಿತು. ಇದರಲ್ಲಿ ಭಾಗ ವಹಿಸುವವರಿಗೆ ಸರಿಯಾಗಿ ಮನವರಿಕೆಯಾಗಲೆಂಬ ಉದ್ದೇಶದಿಂದ ಹಿಂದಿ ಮತ್ತು ಇಂಗ್ಲೀಷನಲ್ಲಿ ಏಕಕಾಲದಲ್ಲಿ ನಡೆಸಿಕೊಡಲಾಯಿತು.

ಜೀವನದ ಧ್ಯೇಯ, ಮಾರ್ಗ ಮತ್ತು ಸಾಧನೆಗಳು, ಗುರು ಎಂಬ ವಿಷಯಗಳಬಗ್ಗೆ ಗುಂಪುಚರ್ಚೆ ನಡೆಸಲಾಯಿತು. ಇದರಲ್ಲಿ ಪಾಲ್ಗೊಂಡವರೆಲ್ಲರೂ ಈಗಾಗಲೇ ಸತ್ಯೋದಯ ಪುಸ್ತಕವನ್ನೋದಿಕೊಂಡಿದುದರಿಂದ ಎಲ್ಲರೂ ಒಂದೇ ಸ್ತರದಲ್ಲಿದ್ದು, ಚರ್ಚೆಯು ಪರಸ್ಪರ ವಿಚಾರವಿನಿಮಯ ಪೂರಿತವಾಗಿತ್ತು. ಅನಂತರ ಗುರುಗಳು, ಮಿಷನ್, ಮತ್ತು ದಿನಚರಿ ಬರೆವಣಿಗೆ ಈ ವಿಷಯಗಳ ಪ್ರಸ್ತುತಿ ಮಾಡಲಾಯಿತು. ನಂತರ ಅಭ್ಯಾಸಿಗಳು ವಾಲೆಂಟರಿ ಕೆಲಸಮಾಡಲು, ದಿನಚರಿ ಬರೆಯಲು, ಮತ್ತು ಇಡೀ ದಿನದಲ್ಲಿ ಕಲಿತಿದ್ದುದನ್ನು ಮೆಲುಕುಹಾಕಲು ಮುಕ್ತರಾಗಿದ್ದರು.

ಎರಡನೇಯದಿನ ಸತ್ಸಂಗದ ನಂತರ ಸತತಸ್ಮರಣೆ, ಗುರಿ, ಶೀಘ್ರಪ್ರಗತಿಗಾಗಿ ಮಾರ್ಗಗಳು ಎಂಬ ವಿಷಯಗಳ ಮೇಲೆ ಭಾಷಣಗಳಾದುವು. ಸಹಜಮಾರ್ಗದ ಹತ್ತು ನಿಯಮಗಳ ಮೇಲೆ ಆದ ಚರ್ಚೆಯ ನಂತರ ಕಾರ್ಯಕ್ರಮವು ಮುಕ್ತಾಯಗೊಂಡಿತು.



## ಮಕ್ಕಳ ಕ್ಯಾಂಪ್,–ಮುಂಬಯಿ

ಎಪ್ರಿಲ್ 10–12, 2009, ರಂದು ಜರುಗಿದ ಮಕ್ಕಳ ಸಹಜ ಮೋಜಿನ ಕ್ಯಾಂಪ್, 53 ಮಕ್ಕಳು ಭಾಗವಹಿಸಿದ್ದರು. ಈ ಕ್ಯಾಂಪು, 9 ರಿಂದ 13 ವಯಸ್ಸಿನ ಮಕ್ಕಳಿಗಾಗಿ ಏರ್ಪಡಿಸಲಾಗಿತ್ತು. ಗುರುಗಳ ಸಂದರ್ಶನದಿಂದ ಈಗಾಗಲೇ ಪ್ರೇರಿತಗೊಂಡ ಸ್ವಯಂಸೇವಕರು ಸಿದ್ಧರಾಗಿ ಮೋಜಿನಿಂದಲೂ, ಮೂಲ್ಯಾಧಾರದಿಂದಲೂ ಕೂಡಿದ ಈ ಕಾರ್ಯಕ್ರಮವನ್ನು ಆಯೋಜಿಸಿದರು.

ಮಕ್ಕಳನ್ನು ಆರು ಗುಂಪು ಗಳಾಗಿ ವಿಭಾಗಿಸಲಾಯಿತು. ಪ್ರೇಮ, ಸಹನೆ, ತಾಳ್ಮೆ, ನಿಶ್ಚಯ, ಸಂತೋಷ ಮತ್ತು ಧೈರ್ಯ.

ರೇಲ್ವೆಯ ವೇಳಾಪತ್ರಿಕೆಯನ್ನಾಧರಿಸಿ, ನಿಗದಿತ ಸ್ಥಳಕ್ಕೆ ಹೇಗೆ ಮುಟ್ಟಬೇಕೆಂಬುದರ ಮೇಲೆ ಕೇಂದ್ರಿಕರಿಸಿ, ಚಟುವಟಿಕೆಗಳನ್ನು ನಡೆಸಲಾಯಿತು. ಮಧ್ಯಾನ್ನದ ಊಟದ ನಂತರ ಮಕ್ಕಳು ತಮ್ಮ ರಚನಾತ್ಮಕತೆಯನ್ನುಪಯೋಗಿಸಿಕೊಂಡು, ಗಾಳಿಗಂಟೆ ತಯಾರಿಸಿದರು. ತಮ್ಮ ಸ್ಯಾಂಡವಿಚ್ ಗಳನ್ನು ತಾವೇ ಮಾಡಿಕೊಂಡು ತಿಂದರು. ಈ ಸತ್ರವು ಕಥೆಗಳನ್ನೋದುವುದು ಮತ್ತು ಸ್ವಲ್ಪ ಖೋ–ಖೋ ಆಟದ ನಂತರ ಮುಕ್ತಾಯ ವಾಯಿತು. ರಾತ್ರಿಯ ಊಟದ ನಂತರ ಮಕ್ಕಳನ್ನು ದೂರದರ್ಶಕದ ಮೂಲಕ ನಕ್ಷತ್ರಗಳನ್ನು ವೀಕ್ಷಿಸಲು ಟೆರೇಸ್ ಮೇಲೆ ಕರೆದೊಯ್ಯಲಾಯಿತು.

ಎಪ್ರಿಲ್ 11 ರಂದು ಮಕ್ಕಳಿಗಾಗಿ ಯೋಗಸತ್ರವಿತ್ತು. ನಂತರ ಅವರು ಕಸುಬಿನ ಜನರ ಸಹಾಯದಿಂದ ರಾಪ್ಪೆಲ್ಲಿಂಗ್ ( ಹಗ್ಗದ ಸಹಾಯದಿಂದ ಮೇಲೆರುವ ಅಥವಾ ಕೆಳಗೆ ಇಳಿಯುವ ಆಟ) ಎಂಬ ರೋಮಾಂಚಕಾರಿ ಹಾಗು ಆನಂದವನ್ನುಂಟು ಮಾಡುವ ಆಟದ ಅನುಭವವನ್ನು ಪಡೆದರು. ಮಧ್ಯಾನ್ನದ ಊಟದ ನಂತರ ರಾಪೆಲ್ಲಿಂಗ್ ಆಟದ ಅನುಭವದ ಬಗ್ಗೆ ಪರಿಚ್ಛೇದವನ್ನು ಬರೆಯುವುದು ಮತ್ತು ಪಾರ್ಸಲ್ ಪಾಸಿಂಗ್ ಆಟವನ್ನು ಆಡಿಸಲಾಯಿತು. ನಂತರ ಜೀವನ ಮೌಲ್ಯಗಳ ಬಗೆಗಿನ ಪವರ್ ಪಾಯಿಂಟ್ ಪ್ರಸ್ತುತಿಯನ್ನು ಸಂಪೂರ್ಣ ಲಕ್ಷ್ಯಗೊಟ್ಟುನೋಡಿದರು. ಆಮೇಲೆ ಮಾಳಿಗೆಯ ಮೇಲೆ ಚೈತನ್ಯದಾಯಕವಾದ ಸಂಗೀತ ಮತ್ತು ನಂತರ ಚಿಕ್ಕದಾದ ಒಂದು ಚಿತ್ರಪಟವನ್ನು ತೋರಿಸಲಾಯಿತು.

ರವಿವಾರ ಮುಂಜಾನೆ ಮಕ್ಕಳು ಗ್ರೀನ್ ಝೋನ್‌ಕ್ಕೆ ಹೋಗಿ ಅಲ್ಲಿನ ನೈಸರ್ಗಿಕ ಸೌಂದರ್ಯವನ್ನನುಭವಿಸಿದರು.ತದನಂತರ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಆಧಾರದ ಮೇಲಿನ ವೈಜ್ಞಾನಿಕ ಪ್ರಯೋಗಗಳನ್ನು(ಉದಾ:– ಆವಶ್ಯಕತೆ ಮತ್ತು ಇಚ್ಛೆಗಳು) ಮಾಡಲಾಯಿತು. ನಂತರ ಮಕ್ಕಳು ಸಾಮಾನ್ಯಜ್ಞಾನ, ವಿಜ್ಞಾನ, ಪೌರಾಣಿಕಕಥೆಗಳು ಮತ್ತು ಸಹಜಮಾರ್ಗದ ಮೂಲತತ್ವಗಳು ಎಂಬ ನಾಲ್ಕು ಸುತ್ತಿನ ಸ್ಪರ್ಧೆಯಲ್ಲಿ ಹೃತ್ಪೂರ್ವಕವಾಗಿ ಭಾಗವಹಿಸಿದರು. ಮಧ್ಯಾಹ್ನದ ಊಟದ ನಂತರ, ಕೇವಲ ತಾಯಿ–ತಂದೆಯರಿಗೋಸ್ಕರ ಒಂದು ಸತ್ರ ನೆರವೇರಿತು. ಇದರೊಂದಿಗೆ ಈ ಕ್ಯಾಂಪಿನ ಮುಕ್ತಾಯವಾಯಿತು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಪ್ರಭಾ ಕೇಂದ್ರಗಳು
ಮೇ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 3

## ರಾಯಚೂರು ಆಶ್ರಮ – ಕರ್ನಾಟಕ

ರಾಯಚೂರಿನಲ್ಲಿಯ ಆಶ್ರಮವು (ಧ್ಯಾನಕೇಂದ್ರದ ಸಮೂಹ), ಪೂಜ್ಯ ಬಾಬೂಜೀ ಮಹಾರಾಜರಿಗೆ ದೇಣಿಗೆಯಾಗಿ ಕೊಡಲಾಗಿದ್ದ ಜಮೀನಿನಲ್ಲಿ ಕಟ್ಟಲಾದ ಮಿಷನ್ನಿನ ಮೊದಲಿನ ಕಟ್ಟಡಗಳಲ್ಲೊಂದಾಗಿದೆ. ಇದು ಪಟ್ಟಣದ ಮಧ್ಯಭಾಗದಲ್ಲಿದ್ದು ಸುಮಾರು 200 ಅಭ್ಯಾಸಿಗಳು ಉಳಿದುಕೊಳ್ಳಲು ಅನುಕೂಲಕರವಾದ ಎಲ್ಲ ಮೂಲಭೂತ ಸೌಕರ್ಯಗಳಿವೆ. ಗುಲಬರ್ಗಾದ ವಾಸ್ತುಶಿಲ್ಪಿ ಶ್ರೀ ಎಲ್.ಟಿ. ಚವ್ಹಾಣರ ಹೇಳಿಕೆಯಂತೆ, ಕಟ್ಟಡದ ಮುಂದಿನ ದರ್ಶನೀಯ ಭಾಗವು ಎತ್ತಿದ ಕೈಗಳಂತಿದ್ದು, ಅದು ನಮ್ಮ ಆಧ್ಯಾತ್ಮಿಕ ಗುರಿಯತ್ತ ನಮ್ಮ ಪ್ರವಾಸ "ಅನಂತದೆಡೆಗೆ" ಎಂಬುದನ್ನು ಸೂಚಿಸುತ್ತದೆ.

ಈ ಆಶ್ರಮವು ದಿ. 16 ನೇ ಜನವರಿ 1970 ರಂದು ಪೂಜ್ಯ ಬಾಬೂಜೀಮಹಾರಾಜರಿಂದ ಶಿಲಾನ್ಯಾಸ ಮಾಡಲ್ಪಟ್ಟಿದ್ದು, ಅಪರೂಪದ ಅನುಗ್ರಹದಿಂದ ತುಂಬಿದೆ ಎಂದು ತೋರುತ್ತದೆ.

ಈ ಆಶ್ರಮವು ಸುಮಾರು 28,300 ಚ.ಅ. ( 195' X145') ಆಕಾರದ ಭೂಮಿಯಮೇಲೆ ನಿಂತಿದೆ.

ಇದರ ತಳಭಾಗವು 140'X100' ಆಗಿದ್ದು, ಆವಶ್ಯಕತೆಗಳಿಗನುಗುಣವಾಗಿ ಹಾಗು ಸಂಪನ್ಮೂಲಗಳ ಉಪಲಬ್ಧತೆಯ ಪ್ರಕಾರ ಹಂತ ಹಂತವಾಗಿ ಕಟ್ಟಲಾಗಿದೆ. ಆಶ್ರಮವು ಗಟ್ಟಿಯಾದ ಕಪ್ಪು ಕಲ್ಲುಗಳಿಂದ ಕಟ್ಟಲ್ಪಟ್ಟು, ಸಂಪೂರ್ಣ ಭೂಭಾಗವು ಧೃಡವಾದ ಗೋಡೆಯ ಆವರಣದಿಂದ ಸಂರಕ್ಷಿಸಲ್ಪಟ್ಟಿದೆ.

ಬಹುಶಃ ಈ ಆಶ್ರಮವು ಎಪ್ಪತ್ತನೇಯ ದಶಕದಲ್ಲಿದ್ದ ಮಿಶನ್ನಿನ ಕೆಲವೇ ದೊಡ್ಡ ಆಶ್ರಮಗಳಲ್ಲೊಂದಾಗಿರಬಹುದು. ಇದು ಸುಮಾರು 70'X30' ಆಕಾರದ ಧ್ಯಾನಮಂದಿರವನ್ನು ಹೊಂದಿದೆ. ಇದು ಪೂರ್ವ ಒತ್ತಡೀಕರಿಸಿದ ತೊಲೆಗಳಿಂದ ಕಟ್ಟಲ್ಪಟ್ಟಿದ್ದು, ಇದೊಂದು ವೈಶಿಷ್ಟ್ಯಪೂರ್ಣವಾಗಿದ್ದು, ತಾಂತ್ರಿಕದೃಷ್ಟಿಯಿಂದ ದೃಢವಾಗಿಯೂ, ಹಾಗು ಬಿರುಕು ಬಿಡಲಾಗದಂತಹುದೂ ಆಗಿದೆ ಎಂದು ಹೇಳಲಾಗುತ್ತದೆ. ಹಾಲಿನ ಒಂದೆಡೆಗೆ ಎತ್ತರದ ವೇದಿಕೆ ಹಾಗು ಇನ್ನೊಂದೆಡೆಗೆ ಮೇಲ್ಗಡೆ ವೈಶಿಷ್ಟ್ಯಪೂರ್ಣ ಬಾಲ್ಕನಿ ಇದೆ. ಈ ಆಶ್ರಮದಲ್ಲಿ ಅನೇಕ ಕೋಣೆಗಳು ಹಾಗು ಡಾರ್ಮೆಟರಿಯೂ ಇದೆ. ಈಗ ಈ ಡಾರ್ಮೆಟರಿಯನ್ನು ನೂತನೀಕರಿಸಿ, ಕೇವಲ ಗುರುಗಳ ಉಪಯೋಗಕ್ಕಾಗಿ ಸ್ನಾನಗೃಹವನ್ನೊಳಗೊಂಡ ಕೋಣೆ, ಚಿಕ್ಕದಾದ ಊಟದ ಹಾಲ್ ಆಗಿ ಮಾರ್ಪಡಿಸಲಾಗಿದೆ.

ಅದಲ್ಲದೆ ಪ್ರತ್ಯೇಕವಾಗಿ ಊಟದ ಹಾಲ್, ಅಡುಗೆಮನೆ ಮತ್ತು ದೊಡ್ಡ ಪ್ರಮಾಣದ ಒಕ್ಕೂಟದ ಸಮಯದಲ್ಲಿ ಅಡುಗೆ ಮಾಡಲು ಅನುಕೂಲವಾಗುವಂತೆ ಸಾಕಷ್ಟು ವಿಸ್ತಾರವಾದ ಸ್ಥಳವೂ ಇದೆ. ಸೋದರ ಸೋದರಿಯರಿಗಾಗಿ ಪ್ರತ್ಯೇಕವಾದ ಸ್ವಚ್ಛತಾಗೃಹಗಳಿವೆ.

ಈ ಆಶ್ರಮವು ಮುಂದಿನಭಾಗ ಹಾಗು ಎರಡೂ ಮಗ್ಗುಲಲ್ಲಿ ಕೈದೋಟ ಮತ್ತು ಹುಲ್ಲಿನ ಹಾಸಿಗೆಯಿಂದ ಅಲಂಕೃತಗೊಂಡಿದೆ. ಹಿಂದಿನ ಭಾಗದಲ್ಲಿ ಕಟ್ಟಡಗಳನ್ನು ಬೆಳೆಸಿಕೊಳ್ಳಲು ಅಥವಾ ಬಯಲೂಟದ ವ್ಯವಸ್ಥೆ ಮಾಡಲು ಸಾಕಷ್ಟು ಸ್ಥಳವಿದೆ.

ಈ ಆಶ್ರಮವು ರಾಯಚೂರಿನಲ್ಲಿಯ ಮಾಣಿಕಪ್ರಭು ಮಂದಿರದ ರಸ್ತೆಯಮೇಲಿನ L.V.D., ಕಾಲೇಜಿನ ಹತ್ತಿರ ಇದೆ. ಈ ಪಟ್ಟಣವು ಮುಂಬಯಿ–ಚೆನ್ನೈ, ಮತ್ತು ಮುಂಬಯಿ–ಬೆಂಗಳೂರು ಮುಖ್ಯ ರೈಲುಮಾರ್ಗದಲ್ಲಿದ್ದು, ರೈಲು ಮತ್ತು ಬಸ್ಸುಗಳ ಅನುಕೂಲಕರವಾದ ಸೌಕರ್ಯವಿದೆ. ಇದು ಬಸ್ ನಿಲ್ದಾಣ ಮತ್ತು ರೈಲ್ವೆನಿಲ್ದಾಣಗಳಿಂದ ನಾಲ್ಕು ಕಿ.ಮೀ. ಅಂತರದಲ್ಲಿದ್ದು ಬಹಳಷ್ಟು ಶೈಕ್ಷಣಿಕ ಸಂಸ್ಥೆಗಳಿಂದ ಸುತ್ತುವರಿದಿದೆ.

ಈ ಆಶ್ರಮವು ಕಳೆದ ಮೇ 2006 ರಲ್ಲಿ ಮಿಷನ್ನಿನ ಅಧೀನದಲ್ಲಿ ಬಂದಿದ್ದು, ಆಗಿನಿಂದ ಅನೇಕ ಪ್ರಶಿಕ್ಷಣ ಕಾರ್ಯಕ್ರಮಗಳನ್ನೂ ಹಾಗು ಭಂಡಾರಗಳನ್ನು ಆಚರಿಸಲು ಉಪಯೋಗಿಸಲಾಗುತ್ತಿದೆ.





## ಜಮ್ಮು ಮತ್ತು ಕಾಶ್ಮೀರದಲ್ಲಿ ನೋಂದಣಿ

ಆತನ ಅನುಗ್ರಹದಿಂದ, "ಶ್ರೀ ರಾಮಚಂದ್ರ ಮಿಷನ್ ಜಮ್ಮು ಮತ್ತು ಕಾಶ್ಮೀರ" ಎಂದು J&K ರಾಜ್ಯದ ಸಂಸ್ಥೆಯೆಂದು ನೋಂದಾಯಿಸಲಾಗಿದೆ ಎಂದು ಘೋಷಿಸಲು ಅತ್ಯಂತ ಆನಂದ ವಾಗುತ್ತದೆ.

## ದಿ ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್

ಕೆಳಕಂಡ ಟ್ರಸ್ಟಿಗಳೊಂದಿಗೆ ನೋಂದಾಯಿಸಲಾಗಿದೆ.

ವಿಜಯಕುಮಾರ ಭಟ್ಟರ್ – ಕಾರ್ಯನಿರ್ವಾಹಕ ಟ್ರಸ್ಟಿ
ರಾಜೇಶ ರಾಠೋಡ – ಕಾರ್ಯದರ್ಶಿ
ಪ್ರವೀಣ ದಗಡೀ ಖಜಾಂಚಿ
ಸಂತೋಷಕುಮಾರ ಕಾಂಜೀ – ಟ್ರಸ್ಟೀ
ಸಿ. ಉಮಾ ಪ್ರಭು – ಟ್ರಸ್ಟೀ

SRCM ಮತ್ತು SMSF ಈ ಎರಡೂ ಸಂಸ್ಥೆಗಳು ದಿ. 31 ಮಾರ್ಚ್ 2009 ರ ನಂತರ ಪ್ರಕಟಣೆಯ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಿಬಿಟ್ಟಿದೆ. ಈ ನೂತನ ದಿ ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್ ಈ ಮುಂದಿನ ಎಲ್ಲಾ ಮಿಷನ್ನಿನ ಮತ್ತು ಫೌಂಡೇಶನ್ನಿನ ಅನುಮತಿಯಿಂದ ಪ್ರಕಟಣೆಯ ಕಾರ್ಯಗಳನ್ನು ಕೈಗೊಳ್ಳುತ್ತದೆ.

**To subscribe to this Newsletter please visit http://www.srcm.org/centers/as/in/newsletter/index.jsp**
**For feedback, suggestions and news articles please send email to in.newsletter@srcm.org**

© 2009 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.
This Newsletter is intended exclusively for the members of SRCM.